# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA








ಸಂಪುಟ:01 • ಸಂಚಿಕೆ:212 • ನೋಂದಣಿ ನಂ.:KARKAN27911 • ವಿಜಯನಗರ • 17.01.2024 • ಬುಧವಾರ • ಪುಟ:04 • ಬೆಲೆ:2

Volume:01 • Issue:212 • Reg.No:KARKAN27911 • VIJAYANAGARA • 17.01.2024 • Wednesday • Page:04 • Rs:2


# ಧಾರ್ಮಿಕ ಭಾವನೆಗಿಂತ ಹುಂಡಿಗೆ ಒಲವು

## ಹಂಪಿಯಲ್ಲಿ ಶಿವ ನಂದಿ ನಡುವೆ ಅಡ್ಡವಾದ ಹುಂಡಿ । ಧಾರ್ಮಿಕ ಪರಂಪರೆ ಮರೆತ ದತ್ತಿ ಇಲಾಖೆ ವಿರುದ್ಧ ಭಕ್ತರ ಆಕ್ರೋಶ

**ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಶ್ರೀ ವಿರೂಪಾಕ್ಷೇಶ್ವರ ಸ್ವಾಮಿಯ ದೇವಸ್ಥಾನದಲ್ಲಿ ಧಾರ್ಮಿಕ ಪರಂಪರೆಯನ್ನೆ ಕಡೆಗಣಿಸಿ, ಶಿವಲಿಂಗ ಮತ್ತು ನಂದಿ ನಡುವೆ ಹುಂಡಿಯನ್ನು ಅಡ್ಡವಾಗಿ ಇಟ್ಟಿರುವ ಧಾರ್ಮಿಕ ದತ್ತಿ ಇಲಾಖೆ ನಡೆಗೆ ಭಕ್ತರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಹಂಪಿಯ ವಿರೂಪಾಕ್ಷೇಶ್ವರ ದೇವಸ್ಥಾನದೊಳಗೆ ತೆರಳುತ್ತಿದ್ದಂತೆ ಈಗಾಗಲೇ ಬೃಹತ್ ಹುಂಡಿಯನ್ನು ಧಾರ್ಮಿಕ ದತ್ತಿ ಇಲಾಖೆ ಇಟ್ಟಿದೆ. ಈವರೆಗೂ ಇದರಿಂದ ಭಕ್ತರಿಗೆ ಯಾವುದೇ ಅಡ್ಡಿಯಾಗಿಲ್ಲ. ಭಕ್ತರು ಈ ಹುಂಡಿಗೆ ಕಾಣಿಕೆಯನ್ನು ಹಾಕುತ್ತಿದ್ದಾರೆ. ಈ ಹುಂಡಿ ಸಮೀಪವೇ ಗರ್ಭಗುಡಿ ಪ್ರವೇಶದ್ವಾರದಲ್ಲಿ ಶಿವ ಮತ್ತು ನಂದಿಯ ನಡುವೆ ಅಡ್ಡವಾಗಿ ಹುಂಡಿ ಇಟ್ಟಿರುವುದು ಚರ್ಚೆಗೆ ಗ್ರಾಸವಾಗಿದೆ.

ಶಿವಲಿಂಗ ಮತ್ತು ನಂದಿ ನಡುವೆ ಯಾವುದೇ ತೆರನಾದ ಅಡ್ಡ ಪರದೆ ಸಹಿತ ಎಲ್ಲೂ ಹಾಕುವುದಿಲ್ಲ. ಶಿವಲಿಂಗ ಹಾಗೂ ನಂದಿಯ ನಡುವೆ ಯಾರೂ ನಿಲ್ಲಬಾರದು, ನಂದಿಯ ಕೊಂಬಿನ ನಡುವಿನ ಅಂತರದಲ್ಲಿ ಶಿವಲಿಂಗವನ್ನು ನೋಡಬೇಕು, ಶಿವಲಿಂಗದ ಪ್ರದಕ್ಷಿಣೆ ಮುಗಿದ ನಂತರ ನಂದಿಗೂ ನಮಸ್ಕರಿಸಬೇಕು ಹೀಗೆ ಅನೇಕ ನಿಯಮಗಳು ಹಾಗೂ ಆಚರಣೆಗಳು ಹಿಂದೂ ದಾರ್ಮಿಕ ಪರಂಪರೆಯಲ್ಲಿ ಭಕ್ತರು ಆಚರಿಸಿಕೊಂಡ ಬಂದಿದ್ದಾರೆ. ಆದರೆ ಧಾರ್ಮಿಕ ದತ್ತಿ ಇಲಾಖೆ ಶಿವನ ದೇಗುಲಗಳನ್ನು ಎಲ್ಲಾ ದೇಗುಲದಂತೆ ಕಾಣಬಾರದು. ಶಿವನ ದೇವಾಲಯಗಳು ವಿಶಿಷ್ಟವಾಗಿವೆ. ಶಿವನ ಮೇಲಿನ ನಂದಿ ದೃಷ್ಟಿಯನ್ನು ತಡೆಯುವ ಕೆಲಸಕ್ಕೆ ಯಾರೂ ಕೈಹಾಕಬಾರದು ಎಂಬುದು ಭಕ್ತರ ಅಭಿಪ್ರಾಯವಾಗಿದೆ. ಶಿವನ ಮುಂದೆ ನಂದಿಯು ಕುಳಿತಿರುವುದು ಮನುಜ ನೀನು ಶಿವನಿಗೆ ಶರಣಾಗು. ಶಿವನು ನಿನಗೆ ಬೇಕಿರುವುದನ್ನು ಕರುಣಿಸುವನು ಎನ್ನುವ ಸಂದೇಶವನ್ನು ನಂದಿ ಸಾರುತ್ತದೆ ಎಂಬದು ಭಕ್ತರ ನಂಬಿಕೆಯಾಗಿದೆ. ಧಾರ್ಮಿಕ ದತ್ತಿ ಇಲಾಖೆಯು ಹಿಂದೂ ಭಕ್ತರ ಭಾವನೆಗಳಿಗೆ ಅಡ್ಡಿಯಾಗದಂತೆ, ಹಿಂದೂ ಪರಂಪರೆಗೆ ಧಕ್ಕೆಯಾಗದಂತೆ ಎಷ್ಟು ಬೇಕಾದರೂ ಹುಂಡಿಗಳನ್ನು ಇಡಲಿ. ಆದರೆ ನಂದಿ ಮತ್ತು ಶಿವನ ನಡುವೆ ಅಡ್ಡಗೋಡೆಯಾಗಬಾರದು ಎಂಬುದು ಭಕ್ತರ ಆಗ್ರಹವಾಗಿದೆ. ಧಾರ್ಮಿಕ ದತ್ತಿ ಇಲಾಖೆ ಹಂಪಿ ದೇವಸ್ಥಾನದ ಇಒ ಹನುಮಂತಪ್ಪ ಅವರಿಗೆ ಕರೆ ಮಾಡಿದರೂ ಕರೆ ಸ್ವೀಕರಿಸಲಿಲ್ಲ.



> **ಕಾಣಿಕೆ ಹುಂಡಿ ಬಾಗಿಲಲ್ಲಿ ಅಡ್ಡವಾಗಿ ಇಡುವುದು ಧರ್ಮಕರ್ತರ ಗಮನಕ್ಕೂ ತಂದಿಲ್ಲ. ಆರತಿ ತಟ್ಟೆಗೆ ಭಕ್ತರು ಹಾಕುತ್ತಿದ್ದ ಹಣ ಜೀವನೋಪಾಯಕ್ಕೆ ಅನುಕೂಲವಾಗುತ್ತಿತ್ತು. ಬೇರೆ ಆದಾಯ ಇಲ್ಲ. 15 ಕುಟುಂಬಗಳು ಆರತಿ ತಟ್ಟೆಯ ಕಾಣಿಕೆ ಅವಲಂಬಿಸಿವೆ. ಯಾವುದೇ ಭಕ್ತರಿಗೆ ಹಣಕ್ಕಾಗಿ ಕಿರಿಕಿರಿ ನೀಡುತ್ತಿಲ್ಲ. ಈವರೆಗೂ ಭಕ್ತರಿಂದ ದೂರುಗಳಿಲ್ಲ.**
>
> **– ಅರ್ಚಕರು, ಪರಿಚಾಲಕರು, ಸಹಾಯಕರು ಹಂಪಿ ದೇವಸ್ಥಾನ, ಹಂಪಿ**

> **ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳಿಗೆ ಸರ್ಕಾರದಲ್ಲಿ ಕಾಸಿಲ್ಲ. ದೇವಸ್ಥಾನಗಳಲ್ಲಿ ಹುಂಡಿಗಳ ಸಂಖ್ಯೆ ಹೆಚ್ಚಿಸುತ್ತಿರುವುದೇ ಸಾಕ್ಷಿ. ಹಂಪಿ ವಿರೂಪಾಕ್ಷೇಶ್ವರ ದೇವಸ್ಥಾನದಲ್ಲಿ ಶಿವ ಮತ್ತು ನಂದಿ ನಡುವೆ ಗರ್ಭಗುಡಿಯ ಪ್ರವೇಶ ದ್ವಾರದಲ್ಲಿ ಅಡ್ಡವಾಗಿ ಹುಂಡಿಯನ್ನು ಇಟ್ಟು ನಂದಿ ಶಿವನಿಗೂ ಸಂಪರ್ಕ ಕಡಿತಗೊಳಿಸಿರುವುದು ಧಾರ್ಮಿಕ ಪರಂಪರೆಗೆ ಧಕ್ಕೆ ತಂದಿದೆ. ಕೂಡಲೇ ಶಿವ ನಂದಿ ನಡುವೆ ಅಡ್ಡವಾಗಿ ಇಟ್ಟಿರುವ ಹುಂಡಿಯನ್ನು ತೆಗೆಯಬೇಕು. ಭಕ್ತರಲ್ಲಿನ ಧಾರ್ಮಿಕ ಪರಂಪರೆಗೆ ಧಕ್ಕೆಯಾಗದಂತೆ ಜಿಲ್ಲಾಧಿಕಾರಿಗಳು ಕ್ರಮವಹಿಸಬೇಕು.**
>
> **– ಚನ್ನಬಸವನಗೌಡ ಪಾಟೀಲ್ ಜಿಲ್ಲಾಧ್ಯಕ್ಷರು, ಬಿಜೆಪಿ ವಿಜಯನಗರ ಘಟಕ**

> **ರಾಜ್ಯದ ನಾನಾ ದೇಗುಲಗಳಲ್ಲಿ ಈಗಾಗಲೇ ಕಾಣಿಕೆ ಹುಂಡಿ ಬದಲಿಗೆ ಡಿಜಿಟಲ್ ಸ್ಕ್ಯಾನರ್ ಹಾಕಿದ್ದಾರೆ. ಹಂಪಿಯಲ್ಲಿ ಗರ್ಭ ಗುಡಿಯ ಪ್ರವೇಶದಲ್ಲಿ ಹುಂಡಿಯನ್ನು ಅಡ್ಡ ಇಟ್ಟಿರುವುದರಿಂದ ಮಕ್ಕಳಿಗೂ ಶಿವನ ದರ್ಶನ ದೊರೆಯದು. ಅಲ್ಲದೆ ಶಿವನ ದರ್ಶನಕ್ಕೆ ನಂದಿಗೂ ನಿರ್ಬಂಧಿಸಿದಂತಾಗುತ್ತದೆ. ಭಕ್ತರ ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗದಂತೆ ಹುಂಡಿಗಳನ್ನು ಇಡಲಿ. ಇಲ್ಲವೆ ಡಿಜಿಟಲ್ ಮೂಲಕ ಪಾವತಿಸಲು ಅವಕಾಶ ಕಲ್ಪಿಸಲಿ. ಇಲಾಖೆಯ ಖಾತೆಗೆ ನೇರವಾಗಿ ಹಣ ಜಮೆಯಾಗುತ್ತದೆ.**
>
> **– ಶಿವಪ್ರಕಾಶ, ಭಕ್ತ. ಹೊಸಪೇಟೆ**

**ಮೈಕ್ರೋ ನ್ಯೂಸ್**

## ಬ್ಯಾಟರಿಚಾಲಿತ ವೀಲ್‌ಚೇರ್‌ಗಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ 2023–24ನೇ ಸಾಲಿನ ವಿಕಲಚೇತನರ ದೈಹಿಕ ವಿಕಲಚೇತನರಿಗಾಗಿ ಅನುಷ್ಠಾನಗೊಳಿಸುತ್ತಿರುವ ವೀಲ್‌ಚೇರ್ ಯೋಜನೆಯಡಿ ಬ್ಯಾಟರಿ ಚಾಲಿತ ವೀಲ್‌ಚೇರ್‌ಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ದೈಹಿಕ ವಿಕಲಚೇತನರು ತಮ್ಮ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ವಿ.ಆರ್.ಡಬ್ಲ್ಯೂ, ನಗರ ಸಭೆ, ಪುರಸಭೆ, ಪಟ್ಟಣ ಪಂಚಾಯಿತಿಯಲ್ಲಿ ನಯು.ಆರ್.ಡಬ್ಲ್ಯೂ ಹಾಗೂ ತಾಲೂಕು ಪಂಚಾಯಿತಿಯಲ್ಲಿರುವ ಎಂ.ಆರ್.ಡಬ್ಲ್ಯೂಗಳಲ್ಲಿ ನಿಗದಿತ ಅರ್ಜಿ ನಮೂನೆಯಲ್ಲಿ ಭರ್ತಿ ಮಾಡಿ ಜನವರಿ 30ರೊಳಗಾಗಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿ, ತಾಲೂಕು ಪಂಚಾಯಿತಿ ಆವರಣ, ಸಂಡೂರು ರಸ್ತೆ, ಹೊಸಪೇಟೆ ಹಾಗೂ ವಿಜಯನಗರ ಜಿಲ್ಲೆಯ ತಾಲೂಕು ಪಂಚಾಯಿತಿ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಂ.ಆರ್.ಡಬ್ಲ್ಯೂಗಳಾದ ಹೊಸಪೇಟೆ ಮೊ.ಸಂ: 9945252991, ಹಗರಿಬೊಮ್ಮನಹಳ್ಳಿ ಮೊ.ಸಂ: 9741185924, ಕೂಡ್ಲಿಗಿ ಮೊ.ಸಂ: 8217626361, ಹಡಗಲಿ ಮೊ.ಸಂ: 9900890403, ಕೊಟ್ಟೂರು ಮೊ.ಸಂ: 7353974518, ಹರಪನಹಳ್ಳಿ ಮೊ.ಸಂ: 9901182525, ಇವರಿಗೆ ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳಾದ ಅವಿನಾಶಲಿಂಗ ಎಸ್. ಗೋಟಖಿಂಡಿ ತಿಳಿಸಿದ್ದಾರೆ.

## ಮಾರ್ಚ್ ೯ಕ್ಕೆ ರಾಷ್ಟ್ರೀಯ ಲೋಕ ಅದಾಲತ್

**ಹಂಪಿ ಟೈಮ್ಸ್ ಹೊಸಪೇಟೆ**

ತಾಲ್ಲೂಕು ಕಾನೂನು ಸೇವಾ ಸಮಿತಿ ವತಿಯಿಂದ ರಾಷ್ಟ್ರೀಯ ಲೋಕ ಅದಾಲತ್‌ಅನ್ನು ಮಾರ್ಚ್ 9ರಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ನ್ಯಾಯಾಲಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳು ಇರುವವರು ಕಾರ್ಯಕ್ರಮದಲ್ಲಿ ಭಾಗವಹಿಸಿ ರಾಜಿ ಸಂದಾನದ ಮೂಲಕ ತಮ್ಮ ಪ್ರಕರಣಗಳನ್ನು ಬಗೆಹರಿಸಿಕೊಳ್ಳಬಹುದಾಗಿದೆ ಎಂದು ತಾಲ್ಲೂಕು ಕಾನೂನು ಸೇವಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ಕಿಶನ್ ಬಿ.ಮಾಡಲಗಿ ತಿಳಿಸಿದ್ದಾರೆ.






# ಅನಂತಕುಮಾರ ಹೆಗಡೆ ಶವಯಾತ್ರೆ

## ಅನಂತಕುಮಾರ್ ಹೆಗಡೆ ಅವರ ಫ್ಲೆಕ್ಸ್‌ಗೆ ಮೊಟ್ಟೆ ಎಸೆದು ಧಿಕ್ಕಾರ ಕೂಗಿದರು



**ಹಂಪಿ ಟೈಮ್ಸ್ ಹೊಸಪೇಟೆ**

ಅನಂತಕುಮಾರ್ ಹೆಗಡೆ ಸಿಎಂ ಸಿದ್ದರಾಮಯ್ಯನವರ ವಿರುದ್ಧ ಏಕವಚನದಲ್ಲಿ ಪದಬಳಕೆ ಮಾಡಿರುವುದು ಖಂಡನೀಯ, ಬಹುವಚನದಲ್ಲಿ ಮಾತನಾಡಲು ಯೋಗ್ಯವಲ್ಲದ ವ್ಯಕ್ತಿ ಎಂದು ಕಾಂಗ್ರೆಸ್ ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷ ಸಿರಾಜ್ ಶೇಖ್ ಆಕ್ರೋಶ ವ್ಯಕ್ತಪಡಿಸಿದರು.

ಸಿಎಂ ಸಿದ್ದರಾಮಯ್ಯ ಅವರನ್ನು ಉದ್ದೇಶಿಸಿ ಸಂಸದ ಅನಂತಕುಮಾರ್ ಹೆಗಡೆ ಅವರು ಅವಾಚ್ಯ ಪದ ಬಳಕೆ ಮಾಡಿರುವುದನ್ನು ಖಂಡಿಸಿ ಜಿಲ್ಲಾ ಕಾಂಗ್ರೆಸ್ ಸಮಿತಿಯಿಂದ ನಗರದಲ್ಲಿ ಮಂಗಳವಾರ ಸಂಸದ ಅನಂತ್ ಕುಮಾರ್ ಹೆಗಡೆ ಅವರ ಶವ ಯಾತ್ರೆ ನಡೆಸಿ, ಮಾತನಾಡಿದರು. ಇನ್ನೊಂದು ಬಾರಿ ಸಿದ್ದರಾಮಯ್ಯ ವಿರುದ್ಧ ಬಾಯಿ ಬಿಟ್ಟರೆ ವಿಜಯನಗರ ಜಿಲ್ಲೆಯ ಹೋಬಳಿ ಮತ್ತು ಗ್ರಾಮ ಮಟ್ಟಕ್ಕೆ ಈ ಪ್ರತಿಭಟನೆಯನ್ನು ವಿಸ್ತರಿಸಲಾಗುವುದು. ಮುಖ್ಯಮಂತ್ರಿ ವಿರುದ್ಧ ಮಾತನಾಡಿ, ಸಮಾಜದಲ್ಲಿ ಅಶಾಂತಿ ಉಂಟುಮಾಡಲು ಯತ್ನಿಸುತ್ತಿರುವ ಅನಂತಕುಮಾರ್ ಹೆಗಡೆ ಬಹಿರಂಗ ಕ್ಷಮೆ ಯಾಚಿಸಬೇಕು ಎಂದು ಆಗ್ರಹಿಸಿದರು.

ಈ ಕುರಿತು ತಹಶೀಲ್ದಾರ್ ವಿಶ್ವಜೀತ್ ಮೆಹ್ತಾ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು. ಪಕ್ಷದ ಮುಖಂಡರಾದ ಹಾಲಪ್ಪ ರವಿಕುಮಾರ್,ರಾಮಕೃಷ್ಣನಿಂಬಗಲ್, ಬಣ್ಣದಮನೆ ಸೋಮಶೇಖರ್, ಎಚ್.ಜಿ.ವಿರೂಪಾಕ್ಷ, ಮಂಜುನಾಥ ಯಾದವ್, ಎಚ್.ಮಹೇಶ್, ಖಾಜಾ ಹುಸೇನ್, ಜಿ.ರಾಘವೇಂದ್ರ, ಮೊಹಮ್ಮದ್ ಗೌಸ್, ತಮ್ಮನಳ್ಳಪ್ಪ, ಸಿದ್ದರಾಮಪ್ಪ, ಭರತ್ ಕುಮಾರ್, ಕವಿತಾ ನಾಯ್ಕ್, ಮಂಜುಳಾ, ಶಿಲ್ಪಾ ಮೋಹನ್, ಯೋಗಲಕ್ಷ್ಮಿ ಇತರರು ಇದ್ದರು.ಇದಕ್ಕೂ ಮುನ್ನ ನಗರದ ವಡಕರಾಯ ದೇವಸ್ಥಾನದಿಂದ ಆರಂಭಗೊಂಡ ಅಣಕು ಶವಯಾತ್ರೆ, ಮಹಾತ್ಮ ಗಾಂಧಿ ವೃತ್ತ, ಕೇಂದ್ರ ಬಸ್ ನಿಲ್ದಾಣ, ಡಾ.ಪುನೀತ್ ರಾಜಕುಮಾರ್ ವೃತ್ತ ಮೂಲಕ ತಾಲೂಕು ಕಚೇರಿ ವರೆಗೆ ಆಗಮಿಸಿತು. ಶವಯಾತ್ರೆಯ ಕೊನೆಯಲ್ಲಿ ಅನಂತಕುಮಾರ್ ಹೆಗಡೆ ಅವರ ಫ್ಲೆಕ್ಸ್‌ಗೆ ಮೊಟ್ಟೆ ಎಸೆದು ಧಿಕ್ಕಾರ ಕೂಗಿದರು.

# ಮೊರಬ ಶ್ರೀ ವೀರಭದ್ರೇಶ್ವರ ರಥೋತ್ಸವ



# ವಿವಿಧ ಖಾಲಿ ಹುದ್ದೆಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ರಾಷ್ಟ್ರೀಯ ಆರೋಗ್ಯ ಅಭಿಯಾನದ ಅಡಿಯಲ್ಲಿ ವಿಜಯನಗರ ಜಿಲ್ಲೆಯಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಡಿ.ಎಂ.ಹೆಚ್.ಪಿ ಫಿಜಿಚಿಯಾ ಟ್ರೇಸ್ಟ್, ಟಿ.ಎಂ.ಹೆಚ್.ಪಿ ಫಿಜಿಚಿಯಾ ಟ್ರೇಸ್ಟ್, ಫಿಜಿಚಿಯಾ ಟ್ರೇಸ್ಟ್ ಸೋಶಿಯಲ್ ವರ್ಕರ್ ಹಾಗೂ ಪ್ರೋಗ್ರಾಮರ್/ ಆಪ್ರೇಷ್ನಲ್ ಮ್ಯಾನೇಜರ್‌ತಲಾ ಒಂದು ಹುದ್ದೆಗಳು ಖಾಲಿಯಿದ್ದು ಹುದ್ದೆಗಳ ಸಂಖ್ಯೆಯಲ್ಲಿ ಹೆಚ್ಚುಗೊಳಿಸುವುದು ಅಥವಾ ಕಡಿಮೆಗೊಳಿಸುವುದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದ ನಿರ್ಧಾರದಂತಿರುತ್ತದೆ. ಆಯ್ಕೆಯ ಪ್ರಕ್ರಿಯೆ ಯಾವುದೇ ಬದಲಾವಣೆಯಾದರೂ ಆಯ್ಕೆ ಸಮಿತಿ ತೀರ್ಮಾನವೇ ಅಂತಿಮವಾಗಿರುತ್ತದೆ. ಕೋವಿಡ್–19 ರಲ್ಲಿ ಸರ್ಕಾರಿ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸಿದವರಿಗೆ ಆದ್ಯತೆ ನೀಡಲಾಗುವುದು. 6 ತಿಂಗಳವರೆಗೆ ಸೇವೆ ಸಲ್ಲಿಸಿದವರಿಗೆ ಶೇ.2, 6 ತಿಂಗಳು 1 ದಿನದಿಂದ 12 ತಿಂಗಳವರೆಗೆ ಸೇವೆ ಸಲ್ಲಿಸಿದವರಿಗೆ ಶೇ.4, 12 ತಿಂಗಳು 1 ದಿನದಿಂದ 18 ತಿಂಗಳವರೆಗೆ ಸೇವೆ ಸಲ್ಲಿಸಿದವರಿಗೆ ಶೇ.6, 18 ತಿಂಗಳು 1 ದಿನದಿಂದ 24 ತಿಂಗಳವರೆಗೆ ಸೇವೆ ಸಲ್ಲಿಸಿದವರಿಗೆ ಶೇ.8ರ ಕೃಪಾಂಕವನ್ನು ನೀಡಲಾಗುವುದು. ವಿದ್ಯಾರ್ಹತೆಯಲ್ಲಿ ಪಡೆದ ಅಂಕಗಳ ಶೇಕಡ ಮತ್ತು ಕೋವಿಡ್–19 ಸೇವಾ ಅವಧಿಯ ಕೃಪಾಂಕವನ್ನು ಒಟ್ಟುಗೂಡಿಸಿ ಮೇರಿಟ್ ಲಿಸ್ಟ್‌ನ್ನು ತಯಾರಿಸಲಾಗುವುದು ಮತ್ತು ಹೊಸ ರೋಸ್ಟರ್ ಆಧಾರ ಮೇಲೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ನೇಮಕಾತಿ ಮಾಡಲಾಗುವುದು. ಅರ್ಜಿ ಸಲ್ಲಿಸಲು ಜನವರಿ 30 ಕೊನೆಯ ದಿನವಾಗಿದ್ದು, ಆಸಕ್ತ ಅರ್ಹ ಅಭ್ಯರ್ಥಿಗಳು ದೃಢೀಕರಿಸಿದ ಎಲ್ಲಾ ದಾಖಲಾತಿಗಳ ಪ್ರತಿಗಳೊಂದಿಗೆ ಕಚೇರಿ ಸಮಯದಲ್ಲಿ ಅರ್ಜಿ ಸಲ್ಲಿಸಬೇಕು. ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಯು ವಿಜಯನಗರ ವೆಬ್ ಸೈಟ್ (https://vijayanagaranicin/) ನಲ್ಲಿ ಲಭ್ಯವಿರುತ್ತದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದ ತಿಳಿಸಿದೆ.


## ಎಂ.ಹೆಚ್.ಫೈನಾನ್ಸ್

### ಲೇವಾದೇವಿ ಲೈಸೆನ್ಸ್ ರದ್ದುಪಡಿಸಲು ಮನವಿ

**ನಾನು ಎಂ.ಮೌಲಾಸಾಬ್ ತಂದೆ ಎಂ.ಬಡೇಸಾಬ್, ವಯಸ್ಸು 34 ವರ್ಷ, ವಾಸ: 1ನೇ ವಾರ್ಡ್, ರಹಮತ್‌ನಗರ, ಚಿತ್ತವಾಡಿಗಿ, ಹೊಸಪೇಟೆ, ವಿಜಯನಗರ ಜಿಲ್ಲೆ**

ಹೊಸಪೇಟೆ ಪಟ್ಟಣದಲ್ಲಿ ಲೇವಾದೇವಿ ವ್ಯವಹಾರ ನಡೆಸಲು ಲೇವಾದೇವಿ ನಿಬಂಧಕರು, ಬಳ್ಳಾರಿ ಇವರಿಂದ **ಎಂ.ಹೆಚ್.ಫೈನಾನ್ಸ್** ಅಡಿಯಲ್ಲಿ ದಿನಾಂಕ 23.07.2018 ರಂದು ಲೈಸೆನ್ಸ್ ಸಂ:ಬಿಎಂಎಲ್: 133:2018–19/1783 ಪಡೆದಿದ್ದು, ಲೈಸನ್ಸ್ ಅವಧಿ ದಿನಾಂಕ:23.07.2018 ರಿಂದ 31.03.2023ರವರೆಗೆ ಇರುತ್ತದೆ. 2019–2021ರವರೆಗೆ ಕರೋನ ಕೋವಿಡ್–19 ಇದ್ದುದರಿಂದ ನಾನು ಯಾವುದೇ ಲೇವಾದೇವಿ ವ್ಯವಹಾರ ಮಾಡಿರುವುದಿಲ್ಲ. ಆದ್ದರಿಂದ ಈ ಸದರಿ ಲೈಸೆನ್ಸ್‌ನ್ನು ರದ್ದುಪಡಿಸಬೇಕೆಂದು ಕೋರಿ ದಿನಾಂಕ: 16–01–2024ರಂದು ನೋಟರಿ ಹೆಚ್.ಪಿ.ಕಲ್ಲಂಭಟ್, ಹೊಸಪೇಟೆ ಇವರ ಮೂಲಕ ಪ್ರಮಾಣೀಕರಿಸುತ್ತಿದ್ದೇನೆ.





## ವಚನ ಅರಿವು

### ಆತ್ಮಪ್ರತಿಷ್ಠೆಯ ನುಡಿ

**ವೇದ ಶಾಸ್ತ್ರವನೋದುವುದಕ್ಕೆ ಹಾರುವನಲ್ಲ.
ಇರಿದು ಮೆರೆಯವುದಕ್ಕೆ ಕ್ಷತ್ರಿಯನಲ್ಲ,
ವ್ಯವಹರಿಸುವುದಕ್ಕೆ ವೈಶ್ಯನಲ್ಲ,
ಉಳುವ ಒಕ್ಕಲಮಗನ ತಪ್ಪ ನೋಡದೆ ಒಪ್ಪುಗೊಳ್ಳಯ್ಯಾ,
ಕಾಮಭೀಮ ಜೀವಧನದೊಡೆಯ ನೀನೆ ಬಲ್ಲೆ.**

**– ಒಕ್ಕಲಿಗ ಮುದ್ದಣ್ಣ**

ಬ್ರಾಹ್ಮಣರು ಮಾತ್ರ ವೇದ, ಶಾಸ್ತ್ರಗಳನ್ನು ಓದುವುದು. ಇದು ಅಂದಿನಿಂದ ಇಂದಿನವರೆಗೆ ಅವರೇ ಮಾಡಿದ ಪದ್ಧತಿ. ಅವರೇ ಸೃಷ್ಟಿಸಿಕೊಂಡು, ಅವರೇ ಓದಿ ತಮ್ಮ ಅನುಕೂಲಕ್ಕೆ ಅದನ್ನು ಬಳಸಿಕೊಂಡು ಜನರನ್ನು ಅದರ ಹೆಸರಿನಲ್ಲಿ ಶೋಷಣೆ ಮಾಡಲು ನಾನು ಬ್ರಾಹ್ಮಣನಲ್ಲ. ಖಡ್ಗವನ್ನು ಹಿಡಿದು ಹೋರಾಡಿ, ರಾಜ್ಯವನ್ನು ತನ್ನದಾಗಿಸಿಕೊಂಡು ತಾನೇ ಎಲ್ಲ, ತನ್ನದೇ ಇಡೀ ರಾಜ್ಯ, ಕೋಶ ಎಲ್ಲವೂ, ತನ್ನ ಅನುಮತಿಯಲ್ಲಿಯೇ ಜನರು ಬದುಕಬೇಕು ಎಂದು ಮೆರೆಯುವದಕ್ಕೆ ನಾನು ಕ್ಷತ್ರಿಯನಲ್ಲ. ಇನ್ನೂ ವ್ಯಾಪಾರ ಮಾಡಿ ಬುದ್ಧಿಯನ್ನು ಉಪಯೋಗಿಸಿ ಲಾಭ ಮಾಡಿಕೊಂಡು ಶ್ರೀಮಂತನಾಗಲು ಬಡಜನರನ್ನು ಶೋಷಣೆ ಮಾಡಲು ನಾನು ವೈಶ್ಯನಲ್ಲ. ಭೂಮಿಯನ್ನು ಉತ್ತು, ಬಿತ್ತು, ಬೆಳೆದು ಬೆವರಿಳಿಸಿ ದುಡಿದು ತನ್ನ ಲಾಭವನ್ನು ಬಯಸದೆ ನಾಡಿಗೆ ಅನ್ನ ನೀಡುವ ಒಕ್ಕಲು ಮಗನು. ಮೇಲಿನ ಎಲ್ಲರು ತಪ್ಪು ಮಾಡಬಹುದು ಅಥವ ತಾವು ಬದುಕಲಿಕ್ಕೆ ಮಾಡುವ ಬದುಕು ಅವರದು. ರೈತರದು ನಿಸ್ವಾರ್ಥತೆಯಿಂದ, ಮುಗ್ಧತೆಯಿಂದ ಇಡೀ ಸಮಾಜದ ಹಸಿವನ್ನು ಹಿಂಗಿಸುವ ಜೀವನ. ಇವನಲ್ಲಿ ಯಾವ ತಪ್ಪನ್ನು ಹುಡುಕಬೇಡ ಇವನ ಕಾಯಕ ಶ್ರೇಷ್ಠವಾದುದು. ಅದನ್ನು ಸಮಾಜ, ಶಿವ ಒಪ್ಪಿಕೊಳ್ಳಲೇಬೇಕು. ನನ್ನ ನೋವು ನಿನಗೂ ಗೊತ್ತು ಎನ್ನುತ್ತಾನೆ ಒಕ್ಕಲಿಗ ಮುದ್ದಣ್ಣ.

ಮೇಲಿನ ಎಲ್ಲಾ ಕೆಲಸಗಳನ್ನು ಮಾಡಲು ಅವರಷ್ಟೇ ಯೋಗ್ಯರಲ್ಲ. ಒಕ್ಕಲುತನ ಮಾಡುವ ನಾನೂ ವೇದಗಳನ್ನು ಓದಬಲ್ಲೆ, ಖಡ್ಗವ ಹಿಡಿದು ಹೋರಾಡಿ ರಾಜ್ಯವನ್ನು, ಜನರನ್ನು ಕಾಪಾಡಬಲ್ಲೆ. ಬುದ್ಧಿವಂತಿಕೆಯಿಂದ ವ್ಯಾಪಾರ ಮಾಡಿ ಆರ್ಥಿಕ ಸಮತೋಲನ ಕಾಪಾಡಬಲ್ಲೆ. ಆದರೆ ಇವನೊಬ್ಬ ಹೊಲ ಉಳುವ ಒಕ್ಕಲುತನದವನು ಎಂದು ಕಡೆಗಣ್ಣಿನಿಂದ ನೋಡಬೇಡ. ನಾನು ನಿಮ್ಮಷ್ಟೇ ಸರಿಸಮಾನ ಅರ್ಹತೆಯುಳ್ಳವನು ಅನ್ನುವ ಆತ್ಮಪ್ರತಿಷ್ಠೆಯ ನುಡಿಯಾಗಿಯೂ ನಮಗೆ ಈ ವಚನ ಕಾಣುತ್ತದೆ.

**(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)**

## ದಲಿತ ದೌರ್ಜನ್ಯ ಪ್ರಕರಣಗಳಲ್ಲಿ ಶಿಕ್ಷೆ ಪ್ರಮಾಣದಲ್ಲಿ ರಾಜ್ಯದ ಸಾಧನೆ ತೃಪ್ತಿಕರವಾಗಿಲ್ಲ: ಸಿಎಂ

**ಬೆಂಗಳೂರು:** ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಶಿಕ್ಷೆ ಪ್ರಮಾಣದಲ್ಲಿ ರಾಜ್ಯದ ಸಾಧನೆ ತೃಪ್ತಿಕರವಾಗಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ರಾಜ್ಯ ಪೊಲೀಸ್ ಮಹಾನಿರ್ದೇಶಕರ ಕಚೇರಿಯಲ್ಲಿ ನಡೆದ ಹಿರಿಯ ಪೊಲೀಸ್ ಅಧಿಕಾರಿಗಳ ವಾರ್ಷಿಕ ಸಮಾವೇಶದಲ್ಲಿ ಮಾತನಾಡಿದರು. ಶೋಷಣೆಗೆ ಒಳಗಾದವರಿಗೆ ವ್ಯವಸ್ಥೆ ಮೇಲೆ ನಂಬಿಕೆ ಬರಬೇಕಾದರೆ ದೌರ್ಜನ್ಯ ಪ್ರಕರಣಗಳ ತನಿಖೆಯ ಗುಣಮಟ್ಟ ಹೆಚ್ಚಾಗಬೇಕು. ವೈಜ್ಞಾನಿಕವಾಗಿ ಸಮರ್ಥ ಆರೋಪ ಪಟ್ಟಿ ಸಲ್ಲಿಕೆಯಾಗಬೇಕು ಎಂದು ಸ್ಪಷ್ಟ ಸೂಚನೆ ನೀಡಿದರು.

ಮಹಿಳೆ ಮತ್ತು ಮಕ್ಕಳ ಮೇಲಿನ ದೌರ್ಜನ್ಯದ ಪ್ರಕರಣಗಳಿಗೆ ಸಂಪೂರ್ಣ ಕಡಿವಾಣ ಹಾಕಿ. ಶಿಕ್ಷೆ ಪ್ರಮಾಣ ಹೆಚ್ಚಾಗಬೇಕು. ಇಲ್ಲದಿದ್ದರೆ ಡಿಸಿಪಿ ಗಳನ್ನೇ ಈ ವೈಫಲ್ಯಕ್ಕೆ ಹೊಣೆ ಮಾಡುವುದು ಅನಿವಾರ್ಯವಾಗುತ್ತದೆ ಎಂದು ಎಚ್ಚರಿಸಿದರು. ಪೊಲೀಸರಿಗೆ ನಮ್ಮ ಸರ್ಕಾರ ಸಂಪೂರ್ಣ ಫ್ರೀ ಹ್ಯಾಂಡ್ ಕೊಟ್ಟಿದೆ. ಪೊಲೀಸರ ಕೆಲಸದಲ್ಲಿ ಮೂಗು ತೂರಿಸಬಾರದು ಎನ್ನುವುದು ನನ್ನ ಬದ್ಧತೆ. ಆದರೆ ನಾವು ಫ್ರೀ ಹ್ಯಾಂಡ್ ಕೊಟ್ಟಿದ್ದು ದುರುಪಯೋಗ ಆಗಬಾರದು. ಅದು ಜನರಿಗೆ ಅನುಕೂಲ ಆಗುವಂತಿರಬೇಕು ಎಂದು ಸೂಚಿಸಿದರು.

ವರ್ಗಾವಣೆಗಳಿಗೆ ಪೊಲೀಸ್ ಅಧಿಕಾರಿಗಳು ಹಾತೊರೆಯುವುದು, ಜಾತಿ ಬಳಸುವುದು ಅತ್ಯಂತ ಕೆಟ್ಟದ್ದು. ಹಾಗೆ ಮಾಡಬೇಡಿ ಎಂದು ಸಿಎಂ ಸಿದ್ದರಾಮಯ್ಯ ತಿಳಿ ಹೇಳಿದರು. ನಮ್ಮದು ಜಾತ್ಯತೀತ ರಾಷ್ಟ್ರ. ನಾವುಗಳೇ ನಮ್ಮ ಸಂವಿಧಾನದ ಆಶಯಗಳನ್ನು ಬಲಪಡಿಸಬೇಕು ಎಂದರು. ಆಧುನಿಕ ತಂತ್ರಜ್ಞಾನದ ಬಳಕೆಯಿಂದ ಅಪರಾಧ ಪ್ರಕರಣಗಳಿಗೆ ಕಡಿವಾಣ ಸಾಧ್ಯವಿದೆ.

ಕರ್ನಾಟಕ ನಾಮಕರಣಗೊಂಡು, ಏಕೀಕರಣದ 50 ವರ್ಷದ ನೆನಪಿಗಾಗಿ ಸುವರ್ಣ ಪೊಲೀಸ್ ಭವನ ಕಟ್ಟಡ ನಿರ್ಮಾಣಕ್ಕೆ ಬಜೆಟ್ ನಲ್ಲಿ ಹಣ ನೀಡಲಾಗುವುದು. ಖಾಲಿ ಇರುವ ಪೊಲೀಸ್ ಹುದ್ದೆಗಳನ್ನೂ ಭರ್ತಿ ಮಾಡಲಾಗುವುದು ಎಂದು ಇದೇ ಸಂದರ್ಭದಲ್ಲಿ ಭರವಸೆ ನೀಡಿದರು.

ಗೃಹ ಸಚಿವರಾದ ಜಿ.ಪರಮೇಶ್ವರ್ ಇತರರು ಉಪಸ್ಥಿತರಿದ್ದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 9448633038

**ಹೆಣ್ಣು ಮಕ್ಕಳು ಎಳ್ಳು ಅಮಾವಾಸ್ಯೆ ಮತ್ತು ಶೀಗೆ ಹುಣ್ಣಿಮೆಗಳಲ್ಲಿ ಹೊಲಗಳಲ್ಲಿ ಬಂದಿರುವ ಬೆಳೆಯನ್ನು ಕೊಯ್ಲಿಗೆ ಮುನ್ನ ಪೂಜಿಸಲು ಹಲವಾರು ದಿನಗಳ ಮುಂಚೆಯೇ ಎಳ್ಳು ಹೋಳಿಗೆ ಶೇಂಗಾ ಹೋಳಿಗೆ ಮತ್ತು ಎಣ್ಣೆ (ಹುರಕ್ಕಿ) ಹೋಳಿಗೆಗಳನ್ನು ತಯಾರಿಸುತ್ತಾರೆ.**

# ಭೂಮಿ ತಾಯಿಗೆ ಚರಗಾ





**ವೀಣಾ ಹೇಮಂತಗೌಡ ಪಾಟೀಲ್, ಮುಂಡರಗಿ, ಗದಗ**

ನಮ್ಮ ರೈತರ ಬಾಳಿಗೆ ಭೂಮಿ ತಾಯಿಯೇ ಎಲ್ಲ. ಆಕೆಯ ಆಡೊಂಬಲದಲ್ಲಿ ಇವರ ಆಟ, ಊಟ ಮತ್ತು ಬದುಕಿನ ಪಾಠ. ಜೋಡೆತ್ತುಗಳು ಅವರ ಸಂಗಾತಿ. ಕಷ್ಟವೇ ಬರಲಿ ಸುಖವೇ ಇರಲಿ ಎಲ್ಲವೂ ಆ ಭೂಮಿ ತಾಯಿಯ ಕೃಪೆ ಎಂದು ನಂಬುವ ನಮ್ಮ ಜನರು ವರ್ಷಕ್ಕೆ ಎರಡು ಬಾರಿ ಭೂಮಿ ತಾಯಿಯನ್ನು ಪೂಜಿಸಿ ಆಕೆಗೆ ಕೃತಜ್ಞತೆ ಸಲ್ಲಿಸುತ್ತಾರೆ. ಚರಗ ಚೆಲ್ಲುವ ಮೂಲಕ ಹೊಲದಲ್ಲಿರುವ ಸರ್ವ ಕ್ರಿಮಿಕೀಟಗಳು ಪಶು ಪಕ್ಷಿಗಳಿಗೆ ಆಹಾರವನ್ನು ಒದಗಿಸುತ್ತಾರೆ. ಜೊತೆಗೆ ತಮ್ಮ ಜೋಡೆತ್ತುಗಳಿಗೆ ಜಳಕ ಮಾಡಿಸಿ ಅವುಗಳ ಕೊಂಬುಗಳಿಗೆ ಬಣ್ಣ ಹಚ್ಚಿ ಕೋಡನ್ನು ಕೋಡ್ಡಣಿಸಿನಿಂದ ಶೃಂಗರಿಸಿ, ಬೆನ್ನಿನ ಮೇಲೆ ಹೆಣ್ಣು ಮಕ್ಕಳು ತಯಾರಿಸಿದ ರೇಷ್ಮೆಯವಸ್ತ್ರವನ್ನು ಹೊದಿಸಿ ಅಲಂಕರಿಸುತ್ತಾರೆ. ತಾವು ಕೂಡ ತಯಾರಾಗಿ ಮಕ್ಕಳನ್ನು ಹೊಲಕ್ಕೆ ಹೋಗಿ ಭೂತಾಯಿಗೆ ಪೂಜೆ ಸಲ್ಲಿಸಲು ತಯಾರು ಮಾಡುತ್ತಾರೆ.

ಇನ್ನು ಹೆಣ್ಣು ಮಕ್ಕಳು ಎಳ್ಳು ಅಮಾವಾಸ್ಯೆ ಮತ್ತು ಶೀಗೆ ಹುಣ್ಣಿಮೆಗಳಲ್ಲಿ ಹೊಲಗಳಲ್ಲಿ ಬಂದಿರುವ ಬೆಳೆಯನ್ನು ಕೊಯ್ಲಿಗೆ ಮುನ್ನ ಪೂಜಿಸಲು ಹಲವಾರು ದಿನಗಳ ಮುಂಚೆಯೇ ತಯಾರಿ ಮಾಡಿಕೊಳ್ಳುತ್ತಾರೆ.

ಎಳ್ಳು ಹಚ್ಚಿದ ಹದವಾಗಿ ತಟ್ಟಿ ತಯಾರಿಸಿದ ಸಜ್ಜಿ ರೊಟ್ಟಿ ಜೋಳದ ರೊಟ್ಟಿಗಳು ವಾರಕ್ಕೆ ಮುನ್ನವೇ ತಯಾರಾದರೆ, ಹಬ್ಬಕ್ಕೆ ಒಂದೆರಡು ದಿನಗಳ ಮುನ್ನ ಎಳ್ಳು ಹೋಳಿಗೆ ಶೇಂಗಾ ಹೋಳಿಗೆ ಮತ್ತು ಎಣ್ಣೆ (ಹುರಕ್ಕಿ) ಹೋಳಿಗೆಗಳನ್ನು ತಯಾರಿಸುತ್ತಾರೆ.

ಬನ್ನಿ ಈ ಹೋಳಿಗೆಗಳನ್ನು ಮಾಡುವ ವಿಧಾನ ಅರಿಯೋಣ

ಎಳ್ಳು ಹೋಳಿಗೆ... ಕಪ್ಪು ಎಳ್ಳನ್ನು ತೆಗೆದುಕೊಂಡು ನೀರಿನಲ್ಲಿ ಜಾಲಿಸಿ, ಸ್ವಚ್ಚಗೊಳಿಸಿ ಒಣ ಹಾಕಬೇಕು. ಹೀಗೆ ಒಣಗಿದ ಎಳ್ಳನ್ನು (ಒಂದು ಕಪ್ ಎಳ್ಳಿಗೆ ಒಂದು ಕಪ್ ಬೆಲ್ಲ) ನಿಮಗೆ ಬೇಕಾದ ಪ್ರಮಾಣದ ಎಳ್ಳನ್ನು ಚೆನ್ನಾಗಿ ಹುರಿದು ಮಿಕ್ಸಿಯಲ್ಲಿ ಪುಡಿ ಮಾಡಿಕೊಳ್ಳಬೇಕು. ನೀವು ಎಳ್ಳು ತೆಗೆದುಕೊಂಡಷ್ಟೇ ಅಳತೆಯ ಬೆಲ್ಲವನ್ನು ಕೂಡ ತೆಗೆದುಕೊಳ್ಳಬೇಕು. ಮಿಕ್ಸಿಯಲ್ಲಿ ಹಿಡಿಯುವಷ್ಟು ಎಳ್ಳನ್ನು ಹಾಕಿ ಪುಡಿ ಮಾಡಿಕೊಂಡು ನಂತರ ಅದಕ್ಕೆ ಬೆಲ್ಲವನ್ನು ಕಲಸಿ ಮತ್ತೊಮ್ಮೆ ಮಿಕ್ಸಿಯಲ್ಲಿ ತಿರುವಿಕೊಳ್ಳಬೇಕು. ಹೀಗೆ ಎಲ್ಲಾ ಹುರಿದ ಎಳ್ಳನ್ನು ಪುಡಿ ಮಾಡಿ ಅದಕ್ಕೆ ಬೆಲ್ಲವನ್ನು ಹಾಕಿ ತಿರುವಿಕೊಂಡ ನಂತರ ಅದಕ್ಕೆ ಬೇಕಷ್ಟು ಪ್ರಮಾಣದ ಏಲಕ್ಕಿಯನ್ನು ನುಣ್ಣಗೆ ಅರೆದು ಕಲಸಿಕೊಳ್ಳಬೇಕು. ಮೈದಾ ಹಿಟ್ಟನ್ನು (ಹೋಳಿಗೆ ಮಾಡಲು ಕಲಸುವ ಹಿಟ್ಟಿಗಿಂತ ತುಸು ಗಟ್ಟಿಯಾಗಿ ಆದರೆ ಚಪಾತಿ ಹಿಟ್ಟಿಗಿಂತ ತುಸು ಮೆದುವಾಗಿ) ಸ್ವಲ್ಪ ಎಣ್ಣೆ ಮತ್ತು ತುಸು ಉಪ್ಪನ್ನು ಸೇರಿಸಿ ಕಲಸಿಕೊಳ್ಳಬೇಕು. ಕೊಂಚ ಹಾಲನ್ನು ಕೂಡ ಹಿಟ್ಟು ಕಲಸುವಾಗ ಹಾಕಬಹುದು. ಒಂದು ಅರ್ಧ ಗಂಟೆ ಹಿಟ್ಟು ನೆನೆಯಲು ಬಿಡಬೇಕು. ಅರ್ಧ ಕಪ್ಪಿಗಿಂತ ಕಡಿಮೆ ಹಾಲನ್ನು ಹದವಾಗಿ ಕಾಯಿಸಿ ಅದನ್ನು ಎಳ್ಳು ಬೆಲ್ಲದ ಹೂರಣಕ್ಕೆ ಹಾಕಿಕೊಂಡಾಗ ನಿಧಾನವಾಗಿ ಮೆದುವಾಗುವ ಹೂರಣವನ್ನು ಚೆನ್ನಾಗಿ ಮತ್ತೊಮ್ಮೆ ನಾದಿಕೊಂಡು ಉಂಡೆಗಳನ್ನಾಗಿ ಮಾಡಿಕೊಳ್ಳಬೇಕು.

ನಾದಿದ ಹಿಟ್ಟನ್ನು ಮತ್ತೊಮ್ಮೆ ಮೆದುವಾಗಿ ನಾದಿಕೊಂಡು ಸಣ್ಣ ಸಣ್ಣ ಉರುಳೆಗಳನ್ನಾಗಿ ಮಾಡಿಕೊಳ್ಳಬೇಕು. ಒಂದು ಉರುಳೆಯನ್ನು ತೆಗೆದುಕೊಂಡು ತೆಳುವಾದ ದುಂಡನೆಯ ಚಿಕ್ಕ ಎಲೆಯನ್ನಾಗಿ ಲಟ್ಟಿಸಿಕೊಂಡು ಅದರಲ್ಲಿ ಉಂಡೆ ಮಾಡಿಟ್ಟುಕೊಂಡ ಎಳ್ಳಿನ ಹೂರಣವನ್ನು ಇಟ್ಟು ಚೆನ್ನಾಗಿ ತುಂಬಿಕೊಳ್ಳಬೇಕು. ನಂತರ ಅಕ್ಕಿ ಹಿಟ್ಟಿನಲ್ಲಿ ಅದ್ದಿಕೊಂಡು ಎಲ್ಲೂ ಬಾಯಿ ಬಿಡದಂತೆ ನಿಧಾನವಾಗಿ ಪೂರಿ ಗಾತ್ರದ ಹೋಳಿಗೆಗಳನ್ನು ಲಟ್ಟಿಸಿ ಕಾದ ಹೆಂಚಿನ ಮೇಲೆ ಎರಡು ಕಡೆ ಚೆನ್ನಾಗಿ ಬೇಯಿಸಿ ಹರಡಿದ ಪೇಪರ್‌ನಲ್ಲಿ ಆರಲು ಹಾಕಬೇಕು. ಸ್ವಾದಿಷ್ಟ ಎಣ್ಣೆಯ ಜಿಡ್ಡಿನಂಶವುಳ್ಳ ರುಚಿಕರವಾದ ಎಳ್ಳು ಹೋಳಿಗೆ ತಯಾರ. ಎಳ್ಳು ಹೋಳಿಗೆಗೆ ಕಡ್ಡಾಯವಾಗಿ ತುಪ್ಪವನ್ನು ಸವರಿ ತಿನ್ನಬೇಕು.

ಶೇಂಗಾ ಹೋಳಿಗೆ.... ಸ್ವಚ್ಛವಾದ ಶೇಂಗಾ ಇಲ್ಲವೇ ಕಡಲೆ ಬೀಜಗಳನ್ನು ಚೆನ್ನಾಗಿ ಹುರಿದು ಅವುಗಳ ಮೇಲೆ ಭಾರವಾದ ಕಲ್ಲನ್ನು ಇಲ್ಲವೇ ಚಪಾತಿ ಮಣೆಯನ್ನು ಉರುಳಿಸಿ ಬೇಳೆ ಮಾಡಿಕೊಳ್ಳಬೇಕು. ಬೇಳೆ ಮಾಡಿಕೊಂಡ ಶೇಂಗಾವನ್ನು ಮೊರದಲ್ಲಿ ಹಾಕಿಕೊಂಡು ಚೆನ್ನಾಗಿ ತಿಕ್ಕಿ ಸಿಪ್ಪೆಯನ್ನು ಹೋಗುವಂತೆ ಚಪ್ಪರಿಸಬೇಕು. ಈಗ ಈ ಬೇಳೆಯನ್ನು ಮಿಕ್ಸಿಯಲ್ಲಿ ಸ್ವಲ್ಪ ಸ್ವಲ್ಪ ತೆಗೆದುಕೊಂಡು ಪುಡಿ ಮಾಡಿಕೊಳ್ಳಬೇಕು.ಈ ಶೇಂಗಾ ಪುಡಿಗೆ ಸ್ವಲ್ಪ ಸ್ವಲ್ಪ ಬೆಲ್ಲವನ್ನು ಕಲಸಿ ಮತ್ತೊಮ್ಮೆ ಪುಡಿ ಮಾಡಿಕೊಳ್ಳಬೇಕು. ಈ ಪುಡಿಗೆ ಏಲಕ್ಕಿ ಪುಡಿ ಮತ್ತು ಶುಂಠಿಯ ಪುಡಿಯನ್ನು ಕಲೆಸಬೇಕು.(ಕಡಲೆ ಬೀಜವನ್ನು ಹದವಾಗಿ ಮಂದ ಉರಿಯಲ್ಲಿ ಹುರಿಯಬೇಕು). ಶೀಘ್ರವೇ ಇದರ ಹೂರಣವನ್ನು ಪುಟ್ಟ ಪುಟ್ಟ ಉಂಡೆಗಳನ್ನಾಗಿ ತಯಾರಿಸಿಕೊಳ್ಳಬೇಕು. ಒಂದು ಕೆಜಿ ಶೇಂಗಾ ಗೆ ಒಂದು ಕೆಜಿ ಬೆಲ್ಲ ಹಿಡಿಯುತ್ತದೆ. ಮೈದಾ ಹಿಟ್ಟನ್ನು ಚೆನ್ನಾಗಿ ಸಾಣಿಸಿ ಅದಕ್ಕೆ ಚಿಟಿಕೆಯಷ್ಟು ಉಪ್ಪು, ಕೊಂಚ ಹಾಲು ಮತ್ತು ಸ್ವಲ್ಪ ಎಣ್ಣೆಯನ್ನು ಹಾಕಿ ಅದೆಲ್ಲವನ್ನು ಕಲಸಿ ನಂತರ ನೀರು ಹಾಕಿ ನಾದಿ ಅರ್ಧ ಗಂಟೆಯವರೆಗೆ ಮುಚ್ಚಿಡಬೇಕು. ಇಲ್ಲೂ ಕೂಡ ಹಿಟ್ಟು ಮೆದುವಾಗಿರಬೇಕು.

ಅರ್ಧ ಗಂಟೆಯ ನಂತರ ನೆನೆಸಿಟ್ಟ ಕಣಕದ ಹಿಟ್ಟನ್ನು ಮತ್ತೊಮ್ಮೆ




ನಾದಿಕೊಂಡು ಉರುಳೆಗಳನ್ನಾಗಿ ಮಾಡಿ ಒಂದು ಉರುಳೆಯನ್ನು ಲಟ್ಟಿಸಿ ಅದಕ್ಕೆ ಉಂಡಿ ಮಾಡಿಟ್ಟುಕೊಂಡ ಶೇಂಗಾ ಮತ್ತು ಬೆಲ್ಲದ ಹೂರಣವನ್ನು ಇಟ್ಟು ತುಂಬಬೇಕು. ಹೀಗೆ ತುಂಬಿದ ಉರುಳೆಯನ್ನು ಅಕ್ಕಿ ಹಿಟ್ಟನ್ನು ಹಚ್ಚಿ ನಿಧಾನವಾಗಿ ಪೂರಿ ಆಕಾರದ ಹೋಳಿಗೆಯನ್ನಾಗಿ ತಯಾರಿಸಿಕೊಳ್ಳಬೇಕು. ಹೀಗೆ ತಯಾರಿಸಿದ ಹೋಳಿಗೆಯನ್ನು ನಿಧಾನ ಉರಿಯಲ್ಲಿ ಕೆಂಪಗೆ ಬೇಯಿಸಿಕೊಳ್ಳಬೇಕು. ರುಚಿಯಾದ ಕೆಂಪು ಬಣ್ಣದ ಶೇಂಗಾ ಹೋಳಿಗೆ ತಯಾರ್.

ಹುರಕ್ಕಿ ಹೋಳಿಗೆ ಇಲ್ಲವೇ ಎಣ್ಣೆ ಹೋಳಿಗೆ.... ಸಿರಿ ಧಾನ್ಯಗಳಲ್ಲಿ ಒಂದಾದ ನವಣೆಯನ್ನು ಚೆನ್ನಾಗಿ ಜಾಲಿಸಿ ತೊಳೆದುಕೊಂಡು ಆರಲು ಹಾಕಬೇಕು. ಒಣಗಿದ ನಂತರ ಹದವಾದ ಉರಿಯಲ್ಲಿ ಬೇಕಾದ ಪ್ರಮಾಣದ ನವಣೆಯನ್ನು ತೆಗೆದುಕೊಂಡು ಹುರಿದು ಇಟ್ಟುಕೊಳ್ಳಬೇಕು. ಅದಕ್ಕೆ ಒಂದು ಹಿಡಿಯಷ್ಟು ಅಕ್ಕಿ ಮತ್ತು ಒಂದು ಹಿಡಿಯಷ್ಟು ಕಡಲೆ ಬೇಳೆಯನ್ನು ಕೂಡ ಹುರಿದು ಸೇರಿಸಬೇಕು. ಹೀಗೆ ತಯಾರಿಸಿದ ನವಣೆಯ ಮಿಶ್ರಣವನ್ನು ಗಿರಣಿಯಲ್ಲಿ ಹಿಟ್ಟು ಮಾಡಿಸಿಕೊಳ್ಳಬೇಕು. ಒಲೆಯ ಮೇಲೆ ಪಾತ್ರೆಯೊಂದನ್ನು?ಟ್ಟು ಅದರಲ್ಲಿ ಒಂದು ಗ್ಲಾಸಿಗೂ ಹೆಚ್ಚು ನೀರನ್ನು ಹಾಕಿ ಅದಕ್ಕೆ ಬೆಲ್ಲವನ್ನು ಹಾಕಿ ಕರಗಿಸಿಕೊಳ್ಳಬೇಕು ಪಾಕ ಬರುವ ಮುನ್ನವೇ ಹೀಗೆ ಕರಗಿಸಿದ ಬೆಲ್ಲದ ನೀರನ್ನು ಸಾಣಿಸಿದ ಈ ಹಿಟ್ಟಿಗೆ (ಒಂದು ಕೆಜಿ ಹಿಟ್ಟಿಗೆ ಒಂದು ಕಾಲು ಕೆಜಿಯಷ್ಟು) ಸುರಿದು ಚೆನ್ನಾಗಿ ಕಲಸಿ ಶೀಘ್ರವೇ ಉಂಡೆಗಳನ್ನಾಗಿ ಕಟ್ಟಿಕೊಳ್ಳಬೇಕು. ಮೈದಾ ಹಿಟ್ಟನ್ನು ಚೆನ್ನಾಗಿ ಸಾಣಿಸಿ ತುಸು ಉಪ್ಪು ಕೊಂಚ ಹಾಲು ಮತ್ತು ಸ್ವಲ್ಪ ಎಣ್ಣೆ ಹಾಕಿಕೊಂಡು ಕಲಸಿಕೊಂಡು ನಂತರ ಸ್ವಲ್ಪ ನೀರು ಹಾಕಿಕೊಂಡು ಮೆದುವಾಗಿ ನಾದಿ ಅರ್ಧ ಗಂಟೆಯವರೆಗೆ ಮುಚ್ಚಿಡಬೇಕು. ಕಣಕದ ಹಿಟ್ಟನ್ನು ಮತ್ತೊಮ್ಮೆ ಚೆನ್ನಾಗಿ ಮಿದ್ದಿ(ನಾದಿ)ಕೊಂಡು ಕೊಂಚ ಲಟ್ಟಿಸಿ ಅದರಲ್ಲಿ ಹೂರಣದ ಉಂಡೆಗಳನ್ನು ತುಂಬಿ ಕಾದ ಎಣ್ಣೆಯಲ್ಲಿ ಕರಿಯಬೇಕು. ಹೀಗೆ ಕರಿದ ಹೋಳಿಗೆಗಳಿಗೆ ತುಪ್ಪ ಸವರಿ ತಿಂದರೆ ಸ್ವರ್ಗಕ್ಕೆ ಮೂರೇ ಗೇಣು. ಹಾಗಾದರೆ ಮತ್ತೇಕೆ ತಡ ಹೋಳಿಗೆ ಮಾಡಿಕೊಂಡು ಚರಗಾ ಚೆಲ್ಲಲು ತಯಾರಿ ಮಾಡಿ.

(ವಿ.ಸೂ.... ಕಣಕದ ಹಿಟ್ಟು ಗಟ್ಟಿಯಾದರೆ ಹೋಳಿಗೆಯ ದಂಡೆಗಳಲ್ಲಿ ಕೇವಲ ಕಣಕವೇ ಬರುತ್ತದೆ, ಮತ್ತು ತುಂಬಿಕೊಳ್ಳುವಾಗ ಕಣಕ ಹೀಚದೆ ಹೂರಣ ಹೊರಗೆ ಬರುತ್ತದೆ.)

## ಜಿಲ್ಲಾ ಘಟಕದ ಸರ್ಕಾರಿ ಅರೆ ಸರ್ಕಾರಿ ಎಸ್ಸಿ–ಎಸ್ಟಿ ನೌಕರರ ಪದಗ್ರಹಣ

**■ ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ರಾಜ್ಯ ಸರ್ಕಾರಿ ಅರೆ ಸರ್ಕಾರಿ ಎಸ್ಸಿ–ಎಸ್ಟಿ ನೌಕರರ ವಿಜಯನಗರ ಜಿಲ್ಲಾ ಘಟಕದ ಪದಗ್ರಹಣ ಕಾರ್ಯಕ್ರಮವು ಭಾನುವಾರ ನಗರದ ಸರ್ಕಾರಿ ನೌಕರರ ಸಂಘದ ಭವನದಲ್ಲಿ ಯಶಸ್ವಿಯಾಗಿ ನಡೆಯಿತು.

ರಾಜ್ಯಾಧ್ಯಕ್ಷರ ಆದೇಶದ ಮೇರೆಗೆ ಜಿಲ್ಲಾ ಪದಾಧಿಕಾರಿಗಳ ಉದ್ಘಾಟನಾ ಪದಗ್ರಹಣ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ರಾಜ್ಯ ಸರ್ಕಾರಿ ಎಸ್ಸಿ/ಎಸ್ಟಿ ಸಮನ್ವಯ ಸಮಿತಿ ವಿಜಯನಗರ ಜಿಲ್ಲಾ ಶಾಖೆಯ ಗೌರವಾಧ್ಯಕ್ಷರಾದ ಬಿಸಟ್ಟಿ ತಾಯಪ್ಪ ನಾಯಕ್, ಜಿಲ್ಲಾಧ್ಯಕ್ಷ ಶಿವಕುಮಾರ್, ಪ್ರಧಾನ



ಕಾರ್ಯದರ್ಶಿ ಶಿವಕುಮಾರ್ ಗುಜ್ಜಲ್ ಸೇರಿದಂತೆ ಸರ್ವ ಪದಾಧಿಕಾರಿಗಳು ಹಾಗೂ ಎಲ್ಲಾ ಇಲಾಖೆ ನೌಕರರು ಭಾಗವಹಿಸಿದ್ದರು.

ಜಿಲ್ಲಾ ಶಾಖೆ ನೂತನ ಪದಾಧಿಕಾರಿಗಳು : ಗೌರವಾಧ್ಯಕ್ಷರಾಗಿ ಬಿಸಟ್ಟಿ ತಾಯಪ್ಪ ನಾಯಕ, ಜಿಲ್ಲಾಧ್ಯಕ್ಷರಾಗಿ ಅಜಯ್ ಮದಕರಿ, ಪ್ರಧಾನ ಕಾರ್ಯದರ್ಶಿಯಾಗಿ ವಿಜಯ್ ಭಾಸ್ಕರ್, ಉಪಾಧ್ಯಕ್ಷರಾಗಿ ವಾರ್ತಾ ಇಲಾಖೆಯ ಪಿ.ಕೃಷ್ಣಸ್ವಾಮಿ, ಖಜಾಂಚಿ ಶಿವಶಂಕರ್ ಎಸ್.ಪಿ., ಸಂಘಟನಾ ಕಾರ್ಯದರ್ಶಿಗಳಾಗಿ ಗುರುರಾಜ್, ಉಮೇಶ್ ಚೌಧರಿ, ರಾಮ್ ಬಾಬು, ಹನುಮಂತ ರಾಜೇಂದ್ರ ಕಬ್ಬಡಿ ಅವರು ಅಧಿಕಾರ ವಹಿಸಿಕೊಂಡರು.



## ಕವಿ ಮನಸು

### ಏಕಿಂಥ ಕುಹಕ



ಅಂಡು ಸುಟ್ಟಿಹ ಬೆಕ್ಕಿನಂದದಿ
ದೊಂಡೆಯರಚಲು ತೊಡಗಿದೆ
ಮಂಡೆ ಕೆಟ್ಟಿಹ ತರದ ನುಡಿಗಳು
ಗುಂಡಿ ತೋಡುವವರವರದೇ

ಮಂಕು ಕವಿದಿದೆ ಕೆಲವು ಮಂದಿಗೆ
ಬಿಂಕವೇರಿದ ನಡತೆಯ
ಕೊಂಕು ಮಾತನು ಕೇಳಿ ಅನಿಸಿದೆ
ಸುಂಕ ಪಡೆದಿಹ ಸಂಶಯ

ಕೂತರಾಗದು ನಿಂತರಾಗದು
ಮಾತು ಬರುವುದು ಕುಹಕವೆ
ತೂತು ಕೊರೆವುದು ತಮ್ಮ ದೋಣಿಗೆ
ಸೋತು ನೀರಲಿ ಮುಳುಗುವೆ॥


– ಪೆರ್ಮುಖ ಸುಬ್ರಹ್ಮಣ್ಯ ಭಟ್







## ತುಂಗಭದ್ರಾ ನೀರಿನ ಮಟ್ಟ



| ಮಂಗಳವಾರ : 16-01-2024 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1588.93 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 00 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 10.159 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1620.80 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 10077 ಕ್ಯುಸೆಕ್ |
| ಸಾಮರ್ಥ್ಯ | 63.599 ಟಿಎಂಸಿ |

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಸಾರ್ವಜನಿಕ ಆಸ್ತಿಗಳ ರಕ್ಷಣೆಗೆ ಅಧಿಕಾರಿಗಳು ಮುತುವರ್ಜಿವಹಿಸಲಿ

**ಸಚಿವ ಎನ್.ಎಸ್ ಬೋಸರಾಜು ಹೇಳಿಕೆ | ಜಿಲ್ಲೆಯ ಮತ್ತು ಸಾರ್ವಜನಿಕ ಆಸ್ತಿಗಳ ಅಭಿವೃದ್ಧಿ**

■ ಹಂಪಿ ಟೈಮ್ಸ್ ರಾಯಚೂರು

ಜನರ ಸಹಕಾರದಿಂದ, ಅಧಿಕಾರಿಗಳ ಪ್ರಮಾಣಿಕ ಕಾರ್ಯಗಳಿಂದ ಜಿಲ್ಲೆ ಮತ್ತು ಸಾರ್ವಜನಿಕ ಆಸ್ತಿಗಳ ಅಭಿವೃದ್ಧಿಯಾಗುತ್ತವೆ ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್ ಬೋಸರಾಜು ಅವರು ಹೇಳಿದರು.

ಅವರು ಜ.16ರ(ಮಂಗಳವಾರ) ನಗರದ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ನಗರಸಭೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಹಮ್ಮಿಕೊಂಡಿದ್ದ ನವೀಕರಣಗೊಂಡ ಪಂಡಿತ ಸಿದ್ದರಾಮ ಜಂಬಲದಿನ್ನಿ ಜಿಲ್ಲಾ ರಂಗಮಂದಿರ ಉದ್ಘಾಟನಾ ಸಮಾರಂಭವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಶಾಲೆಗಳು, ಬಸ್ ನಿಲ್ದಾಣ, ಉದ್ಯಾನವನ, ರಂಗಮಂದಿರ ಸೇರಿದಂತೆ ಸಾರ್ವಜನಿಕರ ಉಪಯೋಗಕ್ಕಾಗಿ ಇರುವ ಆಸ್ತಿಗಳು ಅಭಿವೃದ್ಧಿಯಾಗಬೇಕಾದರೆ ಅಧಿಕಾರಿಗಳು ಪ್ರಮಾಣಿಕತೆಯಿಂದ ಕೆಲಸ ಮಾಡಬೇಕು ಜೊತೆಗೆ ಸಾರ್ವಜನಿಕರು ಅವುಗಳನ್ನು ಸುರಕ್ಷಿತವಾಗಿ ಮತ್ತು ಸ್ವಚ್ಛವಾಗಿಟ್ಟುಕೊಳ್ಳಬೇಕು ಎಂದು ತಿಳಿಸಿದರು.

ಕಲಾವಿದರು ಮತ್ತು ಸಾರ್ವಜನಿಕರ ಉಪಯೋಗಕ್ಕಾಗಿ ನಗರದಲ್ಲಿರುವ ಪಂಡಿತ ಸಿದ್ದರಾಮ ಜಂಬಲದಿನ್ನಿ ರಂಗಮಂದಿರವನ್ನು 3 ಕೋಟಿ ವೆಚ್ಚದಲ್ಲಿ ನವೀಕರಣಗೊಳಿಸಲಾಗಿದ್ದು, ಸುಸಜ್ಜಿತ ವ್ಯವಸ್ಥೆಗಳನ್ನು ಅಳವಡಿಸಲಾಗಿದೆ ಇದರಿಂದ ಸಾರ್ವಜನಿಕರಿಗೆ ತುಂಬಾ ಅನುಕೂಲವಾಗಲಿದೆ ಎಂದು ಹೇಳಿದರು.




ರಂಗಮಂದಿರವು ನಗರದ ಅನುಕೂಲಕರ ಪ್ರದೇಶದಲ್ಲಿದ್ದು, ಸಾರ್ವಜನಿಕರು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳಬೇಕು. ಮುಂದಿನ ದಿನಗಳಲ್ಲಿ ನಗರದಲ್ಲಿ ಇನ್ನೂ ಹೆಚ್ಚಿನ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ಒತ್ತು ನೀಡಲಾಗುವುದು ಎಂದರು.

371 ಜೆ ಮೀಸಲಾತಿಯನ್ನು ಗಮನದಲ್ಲಿಟ್ಟುಕೊಂಡು ಜಿಲ್ಲೆಯಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಈಲ್ಲೆಯಲ್ಲಿರುವ ಅನುದಾನದಲ್ಲಿ ಶೇ.25ರಷ್ಟು ಅನುದಾನವನ್ನು ಶಿಕ್ಷಣಕ್ಕೆ ಮೀಸಲಿಡಲಾಗಿದೆ. ಮುಂದಿನ ದಿನಗಳಲ್ಲಿ ರಂಗಮಂದಿರವು ಹೆಚ್ಚಿನ ಜನರಿಗೆ ಉಪಯೋಗವಾಗಬೇಕಿದೆ ಎಂದು ತಿಳಿಸಿದರು.

ಇದೇ ವೇಳೆ ನಗರ ಶಾಸಕ ಡಾ.ಎಸ್.ಶಿವರಾಜ ಪಾಟೀಲ್ ಅವರು ಮಾತನಾಡಿ, ಸರ್ಕಾರಿ ಆಸ್ತಿಗಳನ್ನು ಕಾಪಾಡುವ ಜವಾಬ್ದಾರಿ ಅಧಿಕಾರಿಗಳ ಜೊತೆಗೆ ಸಾರ್ವಜನಿಕರದ್ದು ಆಗಿದೆ ಮುಂದಿನ ದಿನಗಳಲ್ಲಿ ನಗರದ ಐತಿಹಾಸಿಕ ಮಾವಿನ ಕೆರೆ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುವುದು ಅನುದಾನದ ಲಭ್ಯತೆ ಮೇಲೆಅಭಿವೃದ್ಧಿಕಾರ್ಯಕೈಗೆತ್ತಿಕೊಳ್ಳಲಾಗುವುದು ಎಂದು ಹೇಳಿದರು.

ರಾಜ್ಯದಲ್ಲಿ ಅತ್ಯಂತ ಸುಸಜ್ಜಿತ ರಂಗಮಂದಿರವು ರಾಯಚೂರು ಜಿಲ್ಲೆಯಲ್ಲಿದೆ. ಈಲ್ಲೆಯ ಕಲಾವಿದರು ರಂಗಮಂದಿರ ನವೀಕರಣಕ್ಕೆ ಹೆಚ್ಚಿನ ಸಹಕಾರ ನೀಡಿದ್ದಾರೆ. ನವೀಕರಣದಲ್ಲಿ ವಿಳಂಬವಾದರು ಸಹಕರಿಸಿದ್ದಾರೆ ಎಂದು ತಿಳಿಸಿದರು.

ಶಾಲಾ ಮಕ್ಕಳಿಂದ ಸಾಮೂಹಿಕ ಗಾಯನ: ಕಾರ್ಯಕ್ರಮಕ್ಕೂ ಮೊದಲು ಶಾಲಾ ಮಕ್ಕಳಿಂದ ಸಾಮೂಹಿಕ ಪ್ರಥಾನೆಯನ್ನು ಗಾಯನ ಮಾಡಲಾಯಿತು. ಕಾರ್ಯಕ್ರಮದ ಉದ್ಘಾಟಣೆ ನಂತರ ಜಿಲ್ಲೆಯಕಲಾವಿದರಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಈ ಸಂದರ್ಭದಲ್ಲಿ ನಗರಭೆ ಸದಸ್ಯರಾದ ಜಯಣ್ಣ, ಶಶಿರಾಜ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸುರೇಂದ್ರಬಾಬು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಮಂಗಲಾ.ವೆಂ ನಾಯಕ, ಸಾಹಿತಿಗಳಾದ ವಿ.ಎನ್ ಅಕ್ಕಿ, ವೀರಹನುಮಾನ, ಶರಣಪ್ಪ ಗೋನಾಳ, ವೆಂಕಟೇಶ ಬೇವಿನಬೆಂಚಿ, ಈರಣ್ಣ ಬೆಂಗಾಲಿ ಸೇರಿದಂತೆ ನಗರದ ಮುಖಂಡರು ಉಪಸ್ಥಿತರಿದ್ದರು.

# ಜ.18 ಕ್ಕೆ ಸರ್ಕಾರಿ ನೌಕರರ ಸಂಕ್ರಾಂತಿ ಸಂಭ್ರಮೋತ್ಸವ

■ ಹಂಪಿ ಟೈಮ್ಸ್ ಬಳ್ಳಾರಿ

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಬಳ್ಳಾರಿ ಜಿಲ್ಲಾ ಶಾಖೆ ವತಿಯಿಂದ ರಾಜ್ಯ ಸರ್ಕಾರಿ ನೌಕರರ ಸಂಕ್ರಾಂತಿ ಸಂಭ್ರಮೋತ್ಸವ ಕಾರ್ಯಕ್ರಮವನ್ನು ಜ.18 ರಂದು ಬೆಳಿಗ್ಗೆ 10 ಗಂಟೆಗೆ ನಗರದ ಡಾ.ರಾಜ್‌ಕುಮಾರ್ ರಸ್ತೆಯ ರಾಘವ ಕಲಾಮಂದಿರದಲ್ಲಿ ಏರ್ಪಡಿಸಲಾಗಿದೆ. ಯುವಜನ ಸಬಲೀಕರಣ, ಕ್ರೀಡಾ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ನಾಗೇಂದ್ರ ಅವರು ಕಾರ್ಯಕ್ರಮ ಉದ್ಘಾಟಿಸುವರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಬಳ್ಳಾರಿ ಜಿಲ್ಲಾಧ್ಯಕ್ಷ ಎಂ.ಶಿವಾಜಿರಾವ್ ಅವರು ಅಧ್ಯಕ್ಷತೆ ವಹಿಸುವರು.

ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಅವರು ಪ್ರತಿಭಾ ಪುರಸ್ಕಾರ ಮಾಡುವರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಪಿ.ಎಸ್.ಷಡಾಕ್ಷರಿ ಅವರು ಗೌರವ ಉಪಸ್ಥಿತಿ ಇರುವರು.

ಸಂಸದರಾದ ವೈ.ದೇವೇಂದ್ರಪ್ಪ, ಕರಡಿ ಸಂಗಣ್ಣ, ಡಾ.ಸೈಯದ್ ನಾಸೀರ್ ಹುಸೇನ್, ಶಾಸಕರಾದ ಈ.ತುಕಾರಾಂ, ಜೆ.ಎನ್.ಗಣೇಶ್, ಬಿ.ಎಂ.ನಾಗರಾಜ್, ವಿಧಾನ ಪರಿಷತ್ ಶಾಸಕರಾದ ಡಾ.ಚಂದ್ರಶೇಖರ್ ಬಿ.ಪಾಟೀಲ್, ಶಶೀಲ್ ಜಿ.ನಮೋಶಿ, ವೈ.ಎಂ.ಸತೀಶ್, ಮಹಾನಗರ ಪಾಲಿಕೆಯ ಮಹಾಪೌರರಾದ ಬಿ.ಶ್ವೇತಾ ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಬಳ್ಳಾರಿ ವಲಯ ಪೊಲೀಸ್ ಉಪಮಹಾನಿರೀಕ್ಷಕ ಬಿ.ಎಸ್.ಲೋಕೇಶ್ ಕುಮಾರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್. ಎನ್., ಸಹಾಯಕ ಆಯುಕ್ತ ಹೇಮಂತ್.ಎನ್., ಮಹಾನಗರ ಪಾಲಿಕೆ ಆಯುಕ್ತ ಜಿ.ಖಲೀಲ್ ಸಾಬ್, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ್ ತಿಮ್ಮೇಗೌಡ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಕಾರ್ಯಾಧ್ಯಕ್ಷ ಮಲ್ಲಿಕಾರ್ಜುನ ಬಿ.ಬಳ್ಳಾರಿ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯ ಖಜಾಂಚಿ ಡಾ. ಎಸ್.ಸಿದ್ಧರಾಮಣ್ಣ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಹಿರಿಯ ಉಪಾಧ್ಯಕ್ಷ ಎಂ.ವಿ.ರುದ್ರಪ್ಪ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಹಿರಿಯ ಉಪಾಧ್ಯಕ್ಷ ಬಸವರಾಜ್.ಎಸ್., ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯ ಉಪಾಧ್ಯಕ್ಷ ಆರ್. ಮೋಹನ್ ಕುಮಾರ್, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯ ಕಾರ್ಯದರ್ಶಿ ಡಾ.ನೆಲ್ಲುದ್ರಿ ಸದಾನಂದ ಸೇರಿದಂತೆ ಇತರರು ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳುವರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಕಾರ್ಯದರ್ಶಿ, ಜಿ. ಕೆ.ರಾಮಕೃಷ್ಣ, ಜಿಲ್ಲಾ ಖಜಾಂಚಿ ಎಸ್. ಎಂ.ಭದ್ರಯ್ಯ, ಗೌರವಾಧ್ಯಕ್ಷ ಪಿ.ನಾಗರಾಜು, ಕಾರ್ಯಾಧ್ಯಕ್ಷ ಎಂ.ಎ.ಆಸೀಫ್, ಹಿರಿಯ ಉಪಾಧ್ಯಕ್ಷ ಶರಣಬಸಪ್ಪ.ಎಸ್.ಜಿನಿಗಾ, ರಾಜ್ಯ ಸಾಂಸ್ಕೃತಿಕ ಕಾರ್ಯದರ್ಶಿ ಡಾ. ಎನ್.ಶ್ರೀನಿವಾಸರೆಡ್ಡಿ, ರಾಜ್ಯ ಜಂಟಿ ಕಾರ್ಯದರ್ಶಿ ಪಿ.ಅಲ್ಲಬಕಾಷ್, ರಾಜ್ಯ ಸಂಘಟನಾ ಕಾರ್ಯದರ್ಶಿ ಹನುಮಂತರಾಯ, ರಾಜ್ಯ ಜಂಟಿ ಕಾರ್ಯದರ್ಶಿ ಹರಿಪ್ರಸಾದ್, ವಿಭಾಗೀಯ ಸಂಘಟನಾ ಕಾರ್ಯದರ್ಶಿ ಡಿ.ವಿರೇಶ್ ಕುಮಾರ್, ಸಿರುಗುಪ್ಪ ತಾಲ್ಲೂಕು ಅಧ್ಯಕ್ಷ ಎಸ್.ಲಿಂಗರಾಜರೆಡ್ಡಿ, ಸಂಡೂರು ತಾಲ್ಲೂಕು ಅಧ್ಯಕ್ಷ ಚೌಕಳಿ ಪರಶುರಾಮಪ್ಪ, ಕುರುಗೋಡು ತಾಲ್ಲೂಕು ಅಧ್ಯಕ್ಷ ಗುಂಡಪ್ಪನವರ ನಾಗರಾಜ, ಕಂಪ್ಲಿ ತಾಲ್ಲೂಕು ಅಧ್ಯಕ್ಷ ಟಿ.ಗಿರೀಶ್ ಬಾಬು ಸೇರಿದಂತೆ ಜಿಲ್ಲಾ ಮತ್ತು ತಾಲ್ಲೂಕು ಸಂಘದ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ವೃಂದ ಸಂಘಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

# ಕಂದಾಯ ಗ್ರಾಮಗಳ ರಚನೆಗೆ ಹೆಚ್ಚಿನ ಒತ್ತು ನೀಡಿ

**ಸಚಿವ ಕೃಷ್ಣ ಬೈರೇಗೌಡ ಹೇಳಿಕೆ | ಬಿಟ್ಟ ವಸತಿ ಪ್ರದೇಶಗಳನ್ನು ಅಧಿಕಾರಿಗಳು ಜವಾಬ್ದಾರಿಯುತ ನಿರ್ವಹಿಸಬೇಕು**




■ ಹಂಪಿ ಟೈಮ್ಸ್ ರಾಯಚೂರು

ಬಿಟ್ಟು ಹೋದ ವಸತಿ ಪ್ರದೇಶಗಳನ್ನು ಕಂದಾಯ ಗ್ರಾಮಗಳನ್ನಾಗಿಸುವಲ್ಲಿ ಅಧಿಕಾರಿಗಳು ಹೆಚ್ಚಿನ ಜವಾಬ್ದಾರಿ ಯುತವಾಗಿ ಕಾರ್ಯ ನಿರ್ವಹಿಸಬೇಕು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಅವರು ಜ.16ರ(ಮಂಗಳವಾರ) ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಕಂದಾಯ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಒಟ್ಟು 87 ಕಂದಾಯ ಗ್ರಾಮಗಳನ್ನು ಗುರುತಿಸಲಾಗಿದ್ದು, ಇದರಲ್ಲಿ ಒಟ್ಟು 43 ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿಸಲು ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. ಪ್ರಾಥಮಿಕ ಅಧಿಸೂಚನೆ ಹೊರಡಿಸಿರುವ ಪ್ರಕರಣಗಳ ಪೈಕಿ 7 ಅಮತಿಮ ಅಧಿಸೂಚನೆಗಳನ್ನು ಹೊರಡಿಸಲಾಗಿದೆ.

ಅಂತಿಮ ಅಧಿಸೂಚನೆಯ ಸರ್ಕಾರಕ್ಕೆ ಸಲ್ಲಿಕೆಯಾಗಿರುವ 34 ಪ್ರಸ್ತಾವನೆಗಳ ಪಯಕಿ 2 ಪ್ರಕರಣಗಳು ಬಾಕಿ ಇದ್ದು, ಕೂಡಲೇ ಆಯಾ ತಾಲೂಕುಗಳ ಸಂಬಂಧಪಟ್ಟ ಅಧಿಕಾರಿಗಳು ಕಂದಾಯ ಗ್ರಾಮಗಳನ್ನು ರಚನೆ ಮಾಡುವಂತೆ ಸೂಚಿಸಿದರು.

ಬರ ನಿರ್ವಹಣೆಯಲ್ಲಿ ಎಲ್ಲಾ ಇಲಾಖೆಯ ಅಧಿಕಾರಿಗಳು ಅತ್ಯಂತ ಹೆಚ್ಚಿನ ಜಾಗರೂಕತೆಯಿಂದ ಕಾರ್ಯನಿರ್ವಹಿಸಬೇಕು. ಬರ ಸಮಸ್ಯೆಯ ಮೊದಲೇ ಬರ ನಿರ್ವಹಣೆಯ ಕುರಿತು ಕಾರ್ಯ ಚಟುವಟಿಕೆಗಳನ್ನು ಸಿದ್ದವಾಗಿಟ್ಟುಕೊಳ್ಳಬೇಕು. ಎಂದು ತಿಳಿಸಿದರು.

ಕುಡಿಯುವ ನೀರಿನ ಸಮಸ್ಯೆಯಾಗದಂತೆ ಅಧಿಕಾರಿಗಳು ಎಚ್ಚರದಿಂದ ನೋಡಿಕೊಳ್ಳಬೇಕು. ಮುಂಬರುವ ದಿನಗಳಲ್ಲಿ ಜಿಲ್ಲೆಯ 374 ಗ್ರಾಮಗಳಿಗೆ ಕುಡಿಯುವ ನೀರಿನ ಕೊರತೆ ಎದುರಾಗಬಹುದಾಗಿದ್ದು, ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ ನೋಡಿಕೊಳ್ಳುವಂತೆ ಸೂಚನೆ ನೀಡಿದರು.

ಅಧಿಕಾರಿಗಳು ಕಡ್ಡಾಯವಾಗಿ ಇ-ಆಫೀಸ್ ತಂತ್ರಾಂಶದ ಮೂಲಕ ಎಲ್ಲಾ ಕಡತಗಳನ್ನು ಅಪ್‌ಲೋಡ್ ಮಾಡಬೇಕು ಮತ್ತು ಇ-ಆಫೀಸ್ ತಂತ್ರಾಶವನ್ನು ಅನುಷ್ಟಾನಗೊಳಿಸುವಲ್ಲಿ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್ ಬೋಸರಾಜು, ನಗರ ಶಾಸಕ ಡಾ.ಎಸ್.ಶಿವರಾಜ ಪಾಟೀಲ್, ಗ್ರಾಮೀಣ ಶಾಸಕ ಬಸನಗೌಡ ದದ್ದಲ್, ಸಿಂಧನೂರು ಶಾಸಕ ಹಂಪನಗೌಡ ಬಾದರ್ಲಿ, ಮಾನವಿ ಶಾಸಕ ಹಂಪಯ್ಯ ನಾಯಕ, ಮಸ್ಕಿ ಶಾಸಕ ಬಸನಗೌಡ ತುರ್ವಿಹಾಳ, ಪ್ರಾದೇಶಿಕ ಆಯುಕ್ತ ಕೃಷ್ಣ ಬಾಜಪೇಯಿ, ಕಂದಾಯ ಇಲಾಖೆಯ ಆಯುಕ್ತ ಸುನೀಲ್ ಕುಮಾರ, ಜಿಲ್ಲಾಧಿಕಾರಿ ಎಲ್.ಚಂದ್ರಶೇಖರ ನಾಯಕ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ತುಕಾರಾಮ ಪಾಂಡ್ವೆ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಫೆಬ್ರವರಿಯಲ್ಲಿ ಖರೀದಿದಾರರ ಮಾರಾಟಗಾರರ ಸಮ್ಮೇಳನ

■ ಹಂಪಿ ಟೈಮ್ಸ್ ಕೊಪ್ಪಳ

ತೋಟಗಾರಿಕೆ ಇಲಾಖೆ ವತಿಯಿಂದ 2023-24 ನೇ ಸಾಲಿನಲ್ಲಿ ಒಂದು ದಿನದ ಖರೀದಿದಾರರ ಮತ್ತು ಮಾರಾಟಗಾರರ ಸಮ್ಮೇಳನವನ್ನು ಫೆಬ್ರುವರಿ 2024 ರ ಮೊದಲನೇ ವಾರದಲ್ಲಿ ಆಯೋಜಿಸಲಾಗುತ್ತಿದೆ. ಈ ಸಮ್ಮೇಳನದಲ್ಲಿ ಸ್ಥಳೀಯ, ರಾಜ್ಯದ, ಹೊರರಾಜ್ಯದ ಮತ್ತು ಹೊರ ದೇಶದ ವಿವಿಧ ಭಾಗಗಳಿಂದ ಉತ್ಪನ್ನಗಳ ಖರೀದಿದಾರರು ಹಾಗೂ ಕಂಪನಿಗಳು ಭಾಗವಹಿಸಲಿದ್ದಾರೆ.

ತೋಟಗಾರಿಕೆ ಇಲಾಖೆ ವತಿಯಿಂದ ಮುಖ್ಯವಾದ ಹಣ್ಣಿನ ಬೆಳೆಗಳಾದ ಮಾವು, ದಾಳಿಂಬೆ, ಪೇರಲ, ದ್ರಾಕ್ಷಿ, ಬಾಳೆ, ಪಪ್ಪಾಯ ಹಾಗೂ ಮುಂತಾದ ಹಣ್ಣಿನ ಬೆಳೆಗಳ ಉತ್ಪನ್ನಗಳ ಮಾರುಕಟ್ಟೆ ಬೇಡಿಕೆ ಅನುಸಾರ ಖರೀದಾರರ ಮತ್ತು ಮಾರಾಟಗಾರರ ಸಮ್ಮೇಳನವನ್ನು ಆಯೋಜಿಸಲಾಗುತ್ತಿದೆ. ಆದ್ದರಿಂದ ಹಣ್ಣಿನ ಬೆಳೆಗಾರರು ತಮ್ಮ ಬೆಳೆ, ತಳಿ, ಬೆಳೆಯ ವಿಸ್ತೀರ್ಣ ಹಾಗೂ ಪಹಣಿಯ ವಿವರವನ್ನು ಕಡ್ಡಾಯವಾಗಿ ಆಯಾ ತಾಲ್ಲೂಕಾ ತೋಟಗಾರಿಕಾ ಕಛೇರಿಗಳಲ್ಲಿ ನೋಂದಣಿ ಮಾಡಿಸಬೇಕು. ನೋಂದಣಿ ಮಾಡಿದ ರೈತರಿಗೆ ಮಾತ್ರ ಸಮ್ಮೇಳನದಲ್ಲಿ ಭಾಗವಹಿಸಲು ಅನುವು ಮಾಡಿಕೊಡಲಾಗುವುದು.

ಆಯ್ದ ಉತ್ಪನ್ನಗಳನ್ನು ನೇರವಾಗಿ ಖರೀದಾರರ ಕಂಪನಿಗಳಿಗೆ ಮಾರಾಟ ಮಾಡಲು ಜಿಲ್ಲೆಯ ಎಫ್‌ಪಿಒಗಳಿಗೆ ಸಂಪರ್ಕ ಕಲ್ಪಿಸುವುದು, ಜಿಲ್ಲೆಯ ಎಫ್‌ಪಿಒ ಗಳು ಕೈಗೊಳ್ಳುವ ವ್ಯವಹಾರದಲ್ಲಿ ಸಂಧಾನ ಕೌಶಲ್ಯ ಅಭಿವೃದ್ಧಿ ಪಡಿಸುವುದು ಹಾಗೂ ಕೃಷಿ ವ್ಯವಹಾರ ಸಂಬಂಧಿತ ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ, ಆಯಾ ಪ್ರದೇಶಗಳಲ್ಲಿ ಆಯ್ದ ಬೆಳೆ ಬೆಳೆಯುವ ಎಲ್ಲಾ ಜಿಲ್ಲೆಯ ಎಫ್‌ಪಿಒ ಗಳನ್ನು ಒಂದೇ ವೇದಿಕೆಯಡಿ ತರುವುದು, ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಜಿಲ್ಲೆಯ ಎಫ್‌ಪಿಒ ಗಳಿಂದ ಅನುಭವ ಹಂಚಿಕೆ ಹಾಗೂ ಇಂಟರ್ ಎಫ್‌ಪಿಒ ಲಿಂಕೇಜ್, ಜಿಲ್ಲೆಯ ಎಫ್‌ಪಿಒ ಗಳಿಗೆ ಅವಶ್ಯವಿರುವ ಮೂಲಭೂತ ಸೌಕರ್ಯಗಳ ಬಗ್ಗೆ ತಾಂತ್ರಿಕ ಜ್ಞಾನ ವಿಸ್ತರಣೆ, ಅಗತ್ಯ ಪರಿಕರಗಳನ್ನು ನೇರವಾಗಿ ಉತ್ಪಾದಕರಿಂದ ಖರೀದಿಸುವುದಕ್ಕೆ ಜಿಲ್ಲೆಯ ಎಫ್‌ಪಿಒ ಗಳಿಗೆ ಸಂಪರ್ಕ ಕಲ್ಪಿಸುವುದು, ಜಿಲ್ಲೆಯ ಎಫ್‌ಪಿಒ ಗಳು ನೇರವಾಗಿ ಹೊರ ದೇಶಗಳಿಗೆ ತಮ್ಮ ಉತ್ಪನ್ನಗಳನ್ನು ರಫ್ತು ಮಾಡಲು ಹಾಗೂ ಸ್ವತಃ ರಫ್ತುದಾರರಾಗಲು ಮಾಹಿತಿ ನೀಡುವುದು ಸಮ್ಮೇಳನದ ಉದ್ದೇಶವಾಗಿದೆ ಎಂದು ತೋಟಗಾರಿಕೆ ಉಪನಿರ್ದೇಶಕರು ತಿಳಿಸಿದ್ದಾರೆ.

# ಶ್ರೀ ಶಿವಯೋಗಿ ಸಿದ್ಧರಾಮೇಶ್ವರ ಜಯಂತಿ ಕಾರ್ಯಕ್ರಮ ಜ.20 ರಂದು

■ ಹಂಪಿ ಟೈಮ್ಸ್ ಕೊಪ್ಪಳ

ಜಿಲ್ಲಾಡಳಿತದ ವತಿಯಿಂದ ಶ್ರೀ ಶಿವಯೋಗಿ ಸಿದ್ಧರಾಮೇಶ್ವರ ಜಯಂತಿ ಕಾರ್ಯಕ್ರಮವನ್ನು ಜನವರಿ 20 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಸಾಹಿತ್ಯ ಭವನದಲ್ಲಿ ಆಯೋಜಿಸಲಾಗಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಎಸ್. ತಂಗಡಗಿ ಅವರು ಕಾರ್ಯಕ್ರಮ ಉದ್ಘಾಟಿಸುವರು.

ಕರ್ನಾಟಕ ವಿಧಾನಸಭೆಯ ವಿರೋಧ ಪಕ್ಷದ ಮುಖ್ಯ ಸಚೇತಕರು ಹಾಗೂ ಕುಷ್ಟಗಿ ಶಾಸಕರಾದ ದೊಡ್ಡನಗೌಡ ಹನುಮಗೌಡ ಪಾಟೀಲ ಮತ್ತು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು ಹಾಗೂ ಯಲಬುರ್ಗಾ ಶಾಸಕರಾದ ಬಸವರಾಜ ರಾಯರಡ್ಡಿ ಅವರು ಘನ ಉಪಸ್ಥಿತಿ ವಹಿಸುವರು. ಕೊಪ್ಪಳ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಅವರು ಸಮಾರಂಭದ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಸಂಸದರಾದ ಕರಡಿ ಸಂಗಣ್ಣ, ಗಂಗಾವತಿ ಶಾಸಕರಾದ ಗಾಲಿ ಜನಾರ್ಧನರೆಡ್ಡಿ, ವಿಧಾನ ಪರಿಷತ್ ಸದಸ್ಯರುಗಳಾದ ಶಶೀಲ್ ಜಿ.ನಮೋಶಿ, ಡಾ.ಚಂದ್ರಶೇಖರ್ ಬಿ.ಪಾಟೀಲ, ಶರಣಗೌಡ ಅನ್ನದಾನಗೌಡ ಪಾಟೀಲ ಬಯ್ಯಾಪೂರ ಹಾಗೂ ಹೇಮಲತಾ ನಾಯಕ ಪಾಲ್ಗೊಳ್ಳುವರು.

ವಿಶೇಷ ಆಹ್ವಾನಿತರಾಗಿ ಕೃಷ್ಣಭಾಗ್ಯ ಜಲ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಕೆ.ಪಿ.ಮೋಹನರಾಜ ಅವರು ಆಗಮಿಸುವರು.

ಗಜೇಂದ್ರಗಡದ ಎಸ್.ಎಸ್.ಭೂಮರೆಡ್ಡಿ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಅರವಿಂದ ಎಸ್.ವಡ್ಡರ್ ಅವರು ವಿಶೇಷ ಉಪನ್ಯಾಸ ನೀಡುವರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡೆಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಯಶೋಧಾ ಸುನೀಲ್ ವಂಟಗೋಡಿ ಅವರು ಉಪಸ್ಥಿತರಿರುವರು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ಕೊಟ್ರೇಶ ಮರಬನಳ್ಳಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶ್ರೀ ಅಂಬಿಗರ ಚೌಡಯ್ಯ ಜಯಂತಿ ಜ.21ರಂದು

■ ಹಂಪಿ ಟೈಮ್ಸ್ ಕೊಪ್ಪಳ

ಜಿಲ್ಲಾಡಳಿತದ ವತಿಯಿಂದ ಶ್ರೀ ಅಂಬಿಗರ ಚೌಡಯ್ಯ ಜಯಂತಿ ಕಾರ್ಯಕ್ರಮವನ್ನು ಜನವರಿ 21 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಸಾಹಿತ್ಯ ಭವನದಲ್ಲಿ ಆಯೋಜಿಸಲಾಗಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಎಸ್. ತಂಗಡಗಿ ಅವರು ಕಾರ್ಯಕ್ರಮ ಉದ್ಘಾಟಿಸುವರು.

ಕರ್ನಾಟಕ ವಿಧಾನಸಭೆಯ ವಿರೋಧ ಪಕ್ಷದ ಮುಖ್ಯ ಸಚೇತಕರು ಹಾಗೂ ಕುಷ್ಟಗಿ ಶಾಸಕರಾದ ದೊಡ್ಡನಗೌಡ ಹನುಮಗೌಡ ಪಾಟೀಲ ಮತ್ತು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು ಹಾಗೂ ಯಲಬುರ್ಗಾ ಶಾಸಕರಾದ ಬಸವರಾಜ ರಾಯರಡ್ಡಿ ಅವರು ಘನ ಉಪಸ್ಥಿತಿ ವಹಿಸುವರು. ಕೊಪ್ಪಳ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಅವರು ಸಮಾರಂಭದ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಸಂಸದರಾದ ಕರಡಿ ಸಂಗಣ್ಣ, ಗಂಗಾವತಿ ಶಾಸಕರಾದ ಗಾಲಿ ಜನಾರ್ಧನರೆಡ್ಡಿ, ವಿಧಾನ ಪರಿಷತ್ ಸದಸ್ಯರುಗಳಾದ ಶಶೀಲ್ ಜಿ.ನಮೋಶಿ, ಡಾ.ಚಂದ್ರಶೇಖರ್ ಬಿ.ಪಾಟೀಲ, ಶರಣಗೌಡ ಅನ್ನದಾನಗೌಡ ಪಾಟೀಲ ಬಯ್ಯಾಪೂರ ಹಾಗೂ ಹೇಮಲತಾ ನಾಯಕ ಪಾಲ್ಗೊಳ್ಳುವರು.

ವಿಶೇಷ ಆಹ್ವಾನಿತರಾಗಿ ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಕೆ.ಪಿ.ಮೋಹನ್‌ರಾಜ್ ಅವರು ಆಗಮಿಸುವರು.

ಕೂಡ್ಲಿಗಿಯ ಸರ್ಕಾರಿ ಪದವಿಪೂರ್ವ ಕಾಲೇಜಿನ ಸಂಶೋಧಕರು ಹಾಗೂ ಉಪನ್ಯಾಸಕರಾದ ಡಾ. ಇಮಾಮ್ ಸಾಹೇಬ್ ಹಡಗಲಿ ಅವರು ವಿಶೇಷ ಉಪನ್ಯಾಸ ನೀಡುವರು. ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡೆಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಯಶೋಧಾ ಸುನೀಲ್ ವಂಟಗೋಡಿ ಅವರು ಉಪಸ್ಥಿತರಿರುವರು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ಕೊಟ್ರೇಶ ಮರಬನಳ್ಳಿ ತಿಳಿಸಿದ್ದಾರೆ.

ವಿಜಯನಗರ
ಬುಧವಾರ / Wednesday 17.01.2024
ಹಂಪಿ ಟೈಮ್ಸ್
HAMPI TIMES

# ಸೈಕಲ್‌ನಲ್ಲಿ ಡಿಸಿ ಪಟ್ಟಣ ಸಂಚಾರ

## ಕೊಟ್ಟೂರಿನಲ್ಲಿ ಜನತಾ ದರ್ಶನ । ಜನಜಾಗೃತಿ ಮೂಡಿಸಿದ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ

**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾಡಳಿತದಿಂದ ತಾಲ್ಲೂಕು ಮಟ್ಟದ 'ಜನತಾ ದರ್ಶನ' ಕಾರ್ಯಕ್ರಮವು ಜನವರಿ 16ರಂದು ಕೊಟ್ಟೂರಿನಲ್ಲಿ ವಿಭಿನ್ನವಾಗಿ ನಡೆಯಿತು.

ಜನತಾ ದರ್ಶನ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಬೆಳಗ್ಗೆಯೇ ಹೊಸಪೇಟೆಯಿಂದ ಹೊರಟು ಬೆಳಗ್ಗೆ 8.30ಕ್ಕೆ ಕೊಟ್ಟೂರಿಗೆ ಆಗಮಿಸಿದರು. ಬೆಳಗ್ಗೆಯಿಂದಲೇ ಪಟ್ಟಣ ಸಂಚಾರ ಆರಂಭಿಸಿದ ಜಿಲ್ಲಾಧಿಕಾರಿಗಳು, ಸತತ ಎರಡೂವರೆ ಗಂಟೆಗಳ ಕಾಲ ಕೊಟ್ಟೂರ ಪಟ್ಟಣ ಪಂಚಾಯತ್ ವ್ಯಾಪ್ತಿಯ ನಾನಾ ವಾರ್ಡ್‌ಗಳಿಗೆ ತೆರಳಿ ಸಾರ್ವಜನಿಕರ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಚರಂಡಿ ವ್ಯವಸ್ಥೆ, ರಸ್ತೆ ಮತ್ತು ಇತರ ವ್ಯವಸ್ಥೆ ಬಗ್ಗೆ ಮಾಹಿತಿ ಪಡೆದರು.

ಜಿಲ್ಲಾಧಿಕಾರಿಗಳು, ಪಟ್ಟಣದ ಮಹಾತ್ಮ ಗಾಂಧೀಜಿಯವರ ಚಿತಾಭಸ್ಮ ಸ್ಥಳದಿಂದ ಸೈಕಲ್ ಏರಿ ಸಂಚಾರ ಆರಂಭಿಸಿದ್ದು ವಿಶೇಷವಾಗಿತ್ತು. ಅಲ್ಲಿಂದ ವಿವಿಧೆಡೆ ತೆರಳಿ ಸಾರ್ವಜನಿಕರೊಂದಿಗೆ ಆಪ್ತವಾಗಿ ಮಾತನಾಡಿ ಹಲವಾರು ಮಾಹಿತಿ ಪಡೆದರು. ಸಂಚಾರ ನಡೆಸಿದ ಎಲ್ಲ ಕಡೆಗಳಲ್ಲಿ ವಿಶೇಷವಾಗಿ ಶುಚಿತ್ವಕ್ಕೆ ಹೆಚ್ಚಿನ ಒತ್ತು ಕೊಡುವಂತೆ ಜನಜಾಗೃತಿ ಮೂಡಿಸಿದರು.

ಮೊದಲಿಗೆ ಪಟ್ಟಣದ ಉಜ್ಜಯಿನಿ ವೃತ್ತದ ಬಳಿಯಲ್ಲಿನ ಶಾಲೆ ಎದುರು ಇರುವ ಶೌಚಾಲಯಗಳ ವೀಕ್ಷಣೆ ನಡೆಸಿ ಅವುಗಳ ಸ್ವಚ್ಛತೆಗೆ ಕ್ರಮವಹಿಸಲು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗಳಿಗೆ ಸೂಚಿಸಿದರು. ಅಲ್ಲಿಂದ ಕೆಳಗೇರಿ ದುರಗಮ್ಮನ ಗುಡಿ ಮುಂಭಾಗದಿಂದ ಗಚ್ಚಿನಮಠಕ್ಕೆ





ಹೋಗುವ ರಸ್ತೆಯ ಅಕ್ಕಪಕ್ಕದ ಮನೆಗಳ ಸಾರ್ವಜನಿಕರೊಂದಿಗೆ ಮಾತನಾಡಿ ಕುಡಿಯುವ ನೀರಿನ ಬಗ್ಗೆ ಚರ್ಚಿಸಿದರು. ಬಳಿಕ ಗಚ್ಚಿನಮಠದ ಆವರಣದಲ್ಲಿ ನಡೆಯುತ್ತಿದ್ದ ಕಾಮಗಾರಿಯ ಬಗ್ಗೆ ವಿಚಾರಣೆ ಮಾಡಿದರು. ಆನಂತರ ಬಳ್ಳಾರಿ ಕ್ಯಾಂಪ್ ಪ್ರದೇಶಕ್ಕೆ ತೆರಳಿ ಅಲ್ಲಿ ಪಟ್ಟಣ ಪಂಚಾಯಿತಿಯಿಂದ 50 ಮನೆ ಖಾತಾ ದಾಖಲೆ ಫಾರಂ ನಂ.3ಗಳನ್ನು ಸಾಂಕೇತಿಕವಾಗಿ ಕೆಲವರಿಗೆ ವಿತರಿಸಿದರು.

ಬಳಿಕ ಬಸ್ ನಿಲ್ದಾಣದ ಬಳಿಗೆ ತೆರಳಿ ಅಲ್ಲಿನ ನಾನಾ ಹೊಟೆಲ್ ಮಾಲೀಕರರೊಂದಿಗೆ ಆತ್ಮೀಯವಾಗಿ ಮಾತನಾಡಿ ಶುಚಿತ್ವ ಕಾಯ್ದುಕೊಳ್ಳುವುದರ ಬಗ್ಗೆ ಮನವಿ ಮಾಡಿದರು. ಬಸ್ ನಿಲ್ದಾಣದ ಆವರಣದಲ್ಲಿನ ಶೌಚಾಲಯಗಳ ವೀಕ್ಷಣೆ ನಡೆಸಿ ಶುಚಿತ್ವ ಕಾಯ್ದುಕೊಳ್ಳಲು ಬಸ್ ಡಿಪೋ ಮ್ಯಾನೇಜರ್‌ಗೆ ಸೂಚನೆ ನೀಡಿದರು. ಬಾಲಾಜಿ ಲಾಡ್ಜ್ ಪಕ್ಕದಲ್ಲಿರುವ ಮನೆಗಳಿಗೆ ಕಾಲುವೆ ನೀರು ಹರಿಯುತ್ತಿರುವುದನ್ನು ವೀಕ್ಷಣೆ ನಡೆಸಿ ಅಲ್ಲಿ ಶುಚಿತ್ವ ಕಾಯ್ದುಕೊಳ್ಳಲು ಮತ್ತು ಕಾಲುವೆಗೆ ಸರಿಯಾದ ಕಾಮಗಾರಿ ನಡೆಸಲು ಮುಖ್ಯಾಧಿಕಾರಿಗಳಿಗೆ ಸೂಚಿಸಿದರು.

ನಂತರ ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿ ಔಷಧಿ ಸೇರಿದಂತೆ ನಾನಾ ವೈದ್ಯಕೀಯ ಸೌಲಭ್ಯಗಳ ಬಗ್ಗೆ ಮಾಹಿತಿ ಪಡೆದುಕೊಂಡರು. ಆಸ್ಪತ್ರೆಯಲ್ಲಿ ಶುಚಿತ್ವ ಕಾಯ್ದುಕೊಳ್ಳುವಂತೆ ವೈದ್ಯಾಧಿಕಾರಿಗಳಿಗೆ ಸೂಚಿಸಿದರು. ಬಳಿಕ ಕೃಷಿ ಉತ್ಪನ್ನ ಮಾರುಕಟ್ಟೆಗೆ ತೆರಳಿ ಅಲ್ಲಿನ ರಾಗಿ ಖರೀದಿ ಕೇಂದ್ರಕ್ಕೆ ಭೇಟಿ ನೀಡಿ ರೈತರ ನೋಂದಣಿಯ ಬಗ್ಗೆ ಚರ್ಚಿಸಿದರು. ನಗರ ಸಂಚಾರದ ವೇಳೆಯಲ್ಲಿ ಬೀದಿ ಬದಿಯ ವ್ಯಾಪಾರಿಗಳೊಂದಿಗೆ ಮಾತನಾಡಿ ಅವರ ಯೋಗಕ್ಷೇಮ ವಿಚಾರಿಸಿದರು. ಪೌರ ಕಾರ್ಮಿಕರಿಗೆ ಕಡ್ಡಾಯವಾಗಿ ಕೈಗವಸು ಮತ್ತು ತಲೆಗವಸು ಸರಬರಾಜು ಮಾಡಬೇಕು ಎಂದು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗಳಿಗೆ ನಿರ್ದೇಶನ ನೀಡಿದರು. ಪಟ್ಟಣ ಪಂಚಾಯಿತಿಯಿಂದ ಸುರಕ್ಷತಾ ಸಾಮಗ್ರಿ ಪಡೆದುಕೊಂಡೆ ಸ್ವಚ್ಛತಾ ಕಾರ್ಯದಲ್ಲಿ ಭಾಗಿಯಾಗಬೇಕು ಎಂದು ಜಿಲ್ಲಾಧಿಕಾರಿಗಳು ಪೌರ ಕಾರ್ಮಿಕರಿಗೆ ಸಲಹೆ ಮಾಡಿದರು.

**ಅಹವಾಲು ಸ್ವೀಕಾರ:** ಬೆಳಗ್ಗೆ ಎರಡು ಗಂಟೆಗೂ ಹೆಚ್ಚು ಕಾಲ ಗ್ರಾಮ ಸಂಚಾರ ನಡೆಸಿದ ಬಳಿಕ ಜಿಲ್ಲಾಧಿಕಾರಿಗಳು ವೇದಿಕೆಗೆ ಆಗಮಿಸಿದರು. ಕೊಟ್ಟೂರ ಸೇರಿದಂತೆ ಸುತ್ತಲಿನ ನಾನಾ ಹಳ್ಳಿಗಳ ಗ್ರಾಮಸ್ಥರ ಅಹವಾಲು ಆಲಿಸಿದರು. ಬೆಳಗ್ಗೆ 11.15ಕ್ಕೆ ಆರಂಭಗೊಂಡ ಕಾರ್ಯಕ್ರಮವು ಮಧ್ಯಾಹ್ನ 2.30 ಗಂಟೆವರೆಗೆ ಸತತವಾಗಿ ನಡೆಯಿತು. ಸತತ ಮೂರು ಗಂಟೆಗಳ ಕಾಲ ಸಾವಧಾನದಿಂದ ಸಾರ್ವಜನಿಕರ ಅಹವಾಲು ಆಲಿಸಿದ ಜಿಲ್ಲಾಧಿಕಾರಿಗಳು, ಕೆಲವು ಅರ್ಜಿಗಳ ಬಗ್ಗೆ ಸ್ಥಳದಲ್ಲಿದ್ದ ಅಧಿಕಾರಿಗಳೊಂದಿಗೆ ಚರ್ಚಿಸಿ ಸ್ಥಳದಲ್ಲಿಯೇ ಪರಿಹಾರ ಕಲ್ಪಿಸಿದರು. ಬಾಕಿ ಅರ್ಜಿಗಳನ್ನು ಸಂಬಂಧಿಸಿದ ಇಲಾಖೆಗಳಿಗೆ ವರ್ಗಾಯಿಸಲು ಸೂಚನೆ ನೀಡಿದರು. ಜನತಾ ದರ್ಶನದಲ್ಲಿ ಸ್ವೀಕೃತವಾದ ಅರ್ಜಿಗಳಿಗೆ ಕಾಲಮಿತಿಯೊಳಗೆ ಪರಿಹಾರ ಕಲ್ಪಿಸಲು ಆಯಾ ಇಲಾಖೆಗಳ ಅಧಿಕಾರಿಗಳು ಮುತುವರ್ಜಿ ವಹಿಸಬೇಕು ಎಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಗಡುವು ವಿಧಿಸಿದರು.

**ಅರ್ಜಿಗಳ ವಿವರ:** ಜಿಲ್ಲಾಧಿಕಾರಿಗಳಿಂದ ನಡೆದ ಜನತಾ ದರ್ಶನ ಕಾರ್ಯಕ್ರಮದಲ್ಲಿ ಒಟ್ಟು 98 ಅರ್ಜಿಗಳು ಸ್ವೀಕೃತವಾದವು. 38 ಅರ್ಜಿಗಳು ಕಂದಾಯ ಇಲಾಖೆಗೆ, 6 ಅರ್ಜಿಗಳು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಗೆ, 4 ಭೂಮಾಪನ ಇಲಾಖೆಗೆ, 12 ಪಟ್ಟಣ ಪಂಚಾಯಿತಿಗೆ, ತಲಾ 7 ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತಾಲೂಕು ಪಂಚಾಯಿತಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ, ತಲಾ 2 ತೋಟಗಾರಿಕಾ ಇಲಾಖೆ ಮತ್ತು ನೋಂದಣಿ ಇಲಾಖೆಗೆ, ತಲಾ ಒಂದು ಕಾರ್ಮಿಕ ಇಲಾಖೆ, ಲೋಕೋಪಯೋಗಿ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ, ಜೆಸ್ಕಾಂ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಇಲಾಖೆಗೆ, ಅಬಕಾರಿ ಇಲಾಖೆಗೆ ಸ್ವೀಕೃತವಾದವು.

ಸಮಾರಂಭದಲ್ಲಿ ತಹಸೀಲ್ದಾರ ಅಮರೇಶ ಜಿ.ಕೆ. ಸ್ವಾಗತಿಸಿದರು. ಸಿ.ಎಂ.ಗುರುಬಸವರಾಜ ನಿರೂಪಿಸಿದರು. ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ರವಿಕುಮಾರ ವಂದಿಸಿದರು. ಕಂದಾಯ ನರೀಕ್ಷಕರಾದ ಹಾಲಸ್ವಾಮಿ, ಕೊಟ್ಟರ ಗ್ರಾಮ ಲೆಕ್ಕಾಧಿಕಾರಿ ಹರೀಶ್

---

## ಮೈಕ್ರೋ ನ್ಯೂಸ್

### ಶಿವಯೋಗಿ ಸಿದ್ಧರಾಮೇಶ್ವರ ಜಯಂತಿ: ಪುಷ್ಪ ನಮನ ಸಲ್ಲಿಕೆ



**ಹಂಪಿ ಟೈಮ್ಸ್ ಹೊಸಪೇಟೆ**

ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಜಯಂತಿ ಅಂಗವಾಗಿ ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಜನವರಿ 15ರಂದು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸಿದ್ದರಾಮೇಶ್ವರರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಗೌರವ ಸಮರ್ಪಿಸಲಾಯಿತು. ಈ ಸಂದರ್ಭದಲ್ಲಿ ಎನ್.ಎಸ್.ಎ.ಪಿ ಸಹಾಯಕ ನಿರ್ದೇಶಕರಾದ ಷಣ್ಮುಖ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ಸಿದ್ದಲಿಂಗೇಶ ರಂಗಣ್ಣನವರ ಸೇರಿದಂತೆ ಸಮಾಜದ ಮುಖಂಡರು, ಜಿಲ್ಲಾಧಿಕಾರಿ ಕಚೇರಿಯ ಶಿರಸ್ತೆದಾರರು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

### ಗಣರಾಜ್ಯೋತ್ಸವಕ್ಕೆ ಅಗತ್ಯ ಸಿದ್ಧತೆಯಾಗಲಿ: ಎಡಿಸಿ ಅನುರಾಧ ಜಿ

**ಹಂಪಿ ಟೈಮ್ಸ್ ಹೊಸಪೇಟೆ**

ಜ.26ರಂದು ನಡೆಯುವ ಗಣರಾಜ್ಯೋತ್ಸವ ಕಾರ್ಯಕ್ರಮಕ್ಕೆ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿಗಳಾದ ಅನುರಾಧ ಜಿ. ಅವರು ವಿವಿಧ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಜನವರಿ 16ರಂದು ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಗಣರಾಜ್ಯೋತ್ಸವ ಕಾರ್ಯಕ್ರಮವು ಪ್ರತಿ ವರ್ಷದಂತೆ ಈ ವರ್ಷವು ಸಹ ಹೊಸಪೇಟೆಯ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿದೆ. ಇದಕ್ಕಾಗಿ ಈಗಾಗಲೇ ವಿವಿಧ ಸಮಿತಿಗಳನ್ನು ರಚಿಸಿದ್ದು ಆಯಾ ಸಮಿತಿಯಲ್ಲಿರುವ ಅಧಿಕಾರಿಗಳು ತಮಗೆ ವಹಿಸಿದ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು ಎಂದು ಸೂಚನೆ ನೀಡಿದರು.

### ಬ್ಯಾಟರಿ ಚಾಲಿತ ವೀಲ್‌ಚೇರ್ ವಿತರಣೆ: ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ವಿಕಲಚೇತನ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ವತಿಯಿಂದ ದೈಹಿಕ ವಿಕಲಚೇತನರಿಗಾಗಿ 2023-24ನೇ ಸಾಲಿನ ಬ್ಯಾಟರಿ ಚಾಲಿತ ವೀಲ್‌ಚೇರ್ ವಿತರಣೆಯ ಯೋಜನೆಗೆ ಅರ್ಜಿ ಆಹ್ವಾನಿಸಲಾಗಿದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಹೆಚ್. ಗೋವಿಂದಪ್ಪ ಅವರು ತಿಳಿಸಿದ್ದಾರೆ.

ಈ ಯೋಜನೆಗೆ ಅರ್ಜಿ ಸಲ್ಲಿಸಬಯಸುವ ದೈಹಿಕ ವಿಕಲಚೇತನರು ಆಯಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಯು.ಆರ್.ಡಬ್ಲ್ಯೂ ಹಾಗು ತಾಲೂಕು ಪಂಚಾಯಿತಿಯ ಎಂ.ಆರ್. ಡಬ್ಲ್ಯೂ ಅವರನ್ನು ಸಂಪರ್ಕಿಸಿ ನಿಗದಿತ ನಮೂನೆಯಲ್ಲಿ ಜ.30ರ ಒಳಗಾಗಿ ಅರ್ಜಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಕಂಟೋನ್‌ಮೆಂಟ್‌ನ ಶಾಂತಿಧಾಮ ಆವರಣದ ಜಿಲ್ಲಾ ಅಂಗವಿಕಲರ ಕಚೇರಿ ಅಥವಾ ದೂ.08392-267886 ಹಾಗು ಬಳ್ಳಾರಿ ಜಿಲ್ಲೆಯ ತಾಲ್ಲೂಕು ಮಟ್ಟದ ಎಂ.ಆರ್.ಡಬ್ಲ್ಯೂ ಬಳ್ಳಾರಿ-8880875620, ಕಂಪ್ಲಿ-76760389137, ಕುರುಗೋಡು-9538000887, ಸಿರುಗುಪ್ಪ-9743509698, ಸಂಡೂರು-9632052270 ಇವರುಗಳನ್ನು ಸಂಪರ್ಕಿಸಬೇಕು ಎಂದು ತಿಳಿಸಿದ್ದಾರೆ.




---

# ಭಕ್ತರ ಸಮ್ಮುಖದಲ್ಲಿ ಶ್ರೀ ವೀರಭದ್ರೇಶ್ವರ ರಥೋತ್ಸವ

**ಹಂಪಿ ಟೈಮ್ಸ್ ಕೂಡ್ಲಿಗಿ**

ತಾಲೂಕಿನ ಇತಿಹಾಸ ಪ್ರಸಿದ್ಧ ಮೊರಬ ಗ್ರಾಮದ ವೀರಭದ್ರೇಶ್ವರ ರಥೋತ್ಸವ ಮಂಗಳವಾರ ಸಂಜೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಎಳ್ಳು ಅಮವಾಸ್ಯೆಯಿಂದ ಐದು ದಿನಗಳವರೆಗೆ ಶ್ರೀ ವೀರಭದ್ರೇಶ್ವರ ಸ್ವಾಮಿಯ ನಾನಾ ಧಾರ್ಮಿಕ ಕೈಂಕರ್ಯಗಳು ವಿಧಿವತ್ತಾಗಿ ಜರುಗಿದವು. ಸೋಮವಾರ ರಾತ್ರಿ ವೀರಭದ್ರೇಶ್ವರ ಸ್ವಾಮಿಯ ಹಲಗೆ ಉತ್ಸವ ಅತ್ಯಂತ ವೈಭವದಿಂದ ಜರುಗಿತು. ಸಮೇಳ,ಮೇಳ ಹಾಗೂ ನಂದಿಧ್ವಜದ ಮಂಗಳ ವಾದ್ಯಗಳೊಂದಿಗೆ ವೀರಭದ್ರೇಶ್ವರ ಸ್ವಾಮಿಯ ಹಲಗೆ ಕಟ್ಟಿಕೊಂಡ ಭಕ್ತರು, ಬಾಯಿಗೆ,ಕೈಗೆ ಹಾಗೂ ನಾಲಗೆಗೆ ತಾಮ್ರದ ಸರಳುಗಳನ್ನು ಯುವಕರು, ಮಹಿಳೆಯರು ಹಾಗೂ ಚಿಕ್ಕ ಮಕ್ಕಳು ಸಹ ಚುಚ್ಚಿಕೊಂಡು ಭಕ್ತಿಯ ಪರಾಕಾಷ್ಠೆಯನ್ನು ಮೆರೆದರು.ನಂತರ ಉತ್ಸವ ಸಾಗುತ್ತ ಬೆಳಗಿನ ಜಾವ ಶ್ರೀ ಸ್ವಾಮಿಯ ಬಸವನ ಉತ್ಸವ ವಿದ್ಯುಕ್ತವಾಗಿ ನಡೆಯಿತು. ಮಂಗಳವಾರ ಬೆಳಿಗ್ಗೆ ಶ್ರೀ ಸ್ವಾಮಿಗೆ ವಿಶೇಷ ಪೂಜೆ ಮಾಡಿ, ಬೆಳ್ಳಿ ಅಲಂಕಾರ ಮಾಡಲಾಗಿತ್ತು. ಸಂಜೆಯಾಗುತ್ತಲೇ ವೀರಭದ್ರೇಶ್ವರ ರಥೋತ್ಸವಕ್ಕೆ ಸಕಲ ಸಿದ್ದತೆ ಕೈಗೊಂಡು, ರಥಕ್ಕೆ ಹೂವಿನ ಅಲಂಕಾರ ಮಾಡಿ,ರಥದ ಸುತ್ತ ಭಕ್ತರು ತೆಂಗಿನ ಕಾಯಿಗಳ ಗೊಂಚಲು ಕಟ್ಟಿದ್ದರು, ಬಾಳೆಕಂಬ, ತಳಿರು ತೋರಣ ಕಟ್ಟಿ ರಥವನ್ನು ಅಲಂಕರಿಸಿದ್ದರು.ಶ್ರೀ ಸ್ವಾಮಿಯನ್ನು ನೂರಾರು ಭಕ್ತರು ದೇವಸ್ಥಾನದಿಂದ ಮಂಗಳವಾದ್ಯಗಳ ಮೂಲಕ ಬೆಳ್ಳಿ ಪಲ್ಲಕ್ಕಿಯಲ್ಲಿ ಶ್ರೀ ಸ್ವಾಮಿಯನ್ನು ಹೊತ್ತುತಂದು ಮೂರು ಸುತ್ತು ಪ್ರದಕ್ಷಿಣೆ ಹಾಕಿದರು.ನಂತರ ನಡೆದ ಶ್ರೀ ಸ್ವಾಮಿಯ ಪಟ ಹರಾಜಿನಲ್ಲಿ ಹರಪನಹಳ್ಳಿಯ ಕಡಬಗೆರೆಯ ಹಳ್ಳೇರ ಕರಿಯಪ್ಪ(1,80,101) ಒಂದು ಲಕ್ಷದ ಯಂಬತ್ತು ಸಾವಿರದ ಒಂದು ನೂರ ಒಂದು ರೂಪಾಯಿಗಳಿಗೆ ಪಡೆದರು.ನಂತರ ಸ್ವಾಮಿಯನ್ನ ರಥದಲ್ಲಿ ಪ್ರತಿಷ್ಠಾಪಿಸಿ ಸಾವಿರಾರು ಭಕ್ತರ ಜಯಘೋಶದೊಂದಿಗೆ ಬಾಳೆಹಣ್ಣು, ಉತ್ತತ್ತಿ ಎಸೆದು ರಥವನ್ನು ಎಳೆದು ನಂತರ ಮೂಲ ಸ್ಥಾನಕ್ಕೆ ತಂದು ನಿಲ್ಲಿಸಿ ರಥವನ್ನು ಸಂಪನ್ನಗೊಳಿಸಿದರು. ರಥೋತ್ಸವದ ಅಂಗವಾಗಿ ದೂರದ ಈಚಲಬೊವ್ಮನಹಳ್ಳಿ,ಕುಪ್ಪಿನಕೆರೆ,ಸಾಸಲವಾಡ,ಹಿರೆ ಹೆಗ್ಡಾಳು ಹಾಗೂ ಕೂಡ್ಲಿಗಿಯಿಂದ ಆಗಮಿಸುವ ಪಾದಯಾತ್ರಿಗಳಿಗೆ ಕರ್ನಾಟಕ ರಕ್ಷಣಾ ವೇದಿಕೆ ತಾಲೂಕು ಘಟಕದ ಪದಾಧಿಕಾರಿಗಳು ಬೆಳಿಗ್ಗೆಯಿಂದ ಸಂಜೆಯವರೆಗೂ ಸಾವಿರಾರು ಭಕ್ತರಿಗೆ ಅನ್ನ ಸಂತರ್ಪಣೆ ಮಾಡಿದ್ದರು.

---

# ರಾಜೀವ್ ಗಾಂಧಿ ಸೇವಾ ಕೇಂದ್ರ ಕಟ್ಟಡ ವೀಕ್ಷಣೆ

## ಹಾರಕನಾಳುಗೆ ಸಿಇಒ ಸದಾಶಿವ ಪ್ರಭು ಭೇಟಿ, ಪರಿಶೀಲನೆ

**ಹಂಪಿ ಟೈಮ್ಸ್ ಹೊಸಪೇಟೆ**

ನರೇಗಾ ಯೋಜನೆಯಡಿ 35 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ ಹರಪನಹಳ್ಳಿ ತಾಲ್ಲೂಕಿನ ಹಾರಕನಾಳು ಗ್ರಾಮ ಪಂಚಾಯಿತಿಯ ರಾಜೀವ ಗಾಂಧಿ ಸೇವಾ ಕೇಂದ್ರ ನೂತನ ಕಟ್ಟಡ ಸ್ಥಳಕ್ಕೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಸದಾಶಿವ ಪ್ರಭು ಬಿ. ಅವರು ಜನವರಿ 16ರಂದು ಭೇಟಿ ನೀಡಿ ಪರಿಶೀಲಿಸಿದರು.

ರಾಜೀವ ಗಾಂಧಿ ಸೇವಾ ಕೇಂದ್ರ ನೂತನ ಕಟ್ಟಡದ ಮೇಲೆ ಜಿ.ಪಿ.ಎಲ್.ಎಫ್ ಕಟ್ಟಡ ನಿರ್ಮಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು. ಈ ಸಂದರ್ಭದಲ್ಲಿ ಹಾರಕನಾಳು ಗ್ರಾಮ ಪಂಚಾಯಿತಿಯ ಅಧಿಕಾರಿಗಳು ಉಪಸ್ಥಿತರಿದ್ದರು.

---

# ಸ್ಥಳದಲ್ಲಿಯೇ ಆಯುಷ್ಮಾನ್ ಭಾರತ್ ಕಾರ್ಡ್

## ಡಿಹೆಚ್‌ಓ ಡಾ.ವೈ.ರಮೇಶ್ ಬಾಬು ಹೇಳಿಕೆ । ಆರೋಗ್ಯ ಕೇಂದ್ರಗಳಲ್ಲಿ ಬಯೋಮೆಟ್ರಿಕ್ ವ್ಯವಸ್ಥೆ ಮೂಲಕವೂ ಕಾರ್ಡ್‌ಗಳನ್ನು ಸೃಜನೆ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಲ್ಲಿ ವೈದ್ಯಕೀಯ ತಂಡವು ಮನೆ ಮನೆಗೆ ತೆರಳಿ ಅಂಡ್ರಾಯ್ಡ್‌ಮೊಬೈಲ್‌ಗಳಮೂಲಕಫಲಾನುಭವಿಗಳಿಗೆ ಸ್ಥಳದಲ್ಲಿಯೇ ಆಯುಷ್ಮಾನ್ ಭಾರತ್ ಕಾರ್ಡ್‌ಗಳನ್ನು ಸೃಜನೆ ಮಾಡಿಕೊಡುತ್ತಿದ್ದು, ತಾಂತ್ರಿಕ ತೊಂದರೆ ಕಂಡುಬಂದಲ್ಲಿ ಹತ್ತಿರದ ಸಮುದಾಯ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ, ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಬಯೋಮೆಟ್ರಿಕ್ ವ್ಯವಸ್ಥೆ ಮೂಲಕವೂ ಕಾರ್ಡ್‌ಗಳನ್ನು ಸೃಜನೆ ಮಾಡಿಕೊಡಲಾಗುತ್ತಿದೆ. ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ. ರಮೇಶ್‌ಬಾಬು ಅವರು ತಿಳಿಸಿದ್ದಾರೆ.

ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಕಾರ್ಡ್‌ಗಳನ್ನು ಸಾರ್ವಜನಿಕರು ತಮ್ಮ ಅಂಡ್ರಾಯ್ಡಡ ಮೊಬೈಲ್‌ಗಳ ಮೂಲಕ ಮತ್ತು ಹತ್ತಿರದ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಬಯೋಮೆಟ್ರಿಕ್ ವ್ಯವಸ್ಥೆಯೊಂದಿಗೆ ನೋಂದಣಿ ಮಾಡಿಕೊಂಡು ಕಾರ್ಡ್ ಪಡೆಯುವ ಸೌಲಭ್ಯ ಕಲ್ಪಿಸಲಾಗಿದೆ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಎಬಿ-ಪಿಎಮ್‌ಜೆಎವೈ-ಸಿಎಮ್ ಆರ್‌ಕೆ (ಆಯುಷ್ಮಾನ್ ಭಾರತ್ ಪ್ರಧಾನಮಂತ್ರಿ ಜನಾರೋಗ್ಯ ಯೋಜನಾ ಮುಖ್ಯಮಂತ್ರಿ ಆರೋಗ್ಯ ಕರ್ನಾಟಕ) ಎಂಬ ಹೆಸರಿನೊಂದಿಗೆ ದೊರಕುವ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯ ಆಯುಷ್ಮಾನ್ ಕಾರ್ಡ್‌ಗಳನ್ನು ಸಾರ್ವಜನಿಕರು ತಮ್ಮ ಆಂಡ್ರಾಯ್ಡ್



ಮೊಬೈಲ್‌ನಲ್ಲಿ ನೋಂದಣಿ ಮಾಡಿಕೊಳ್ಳುವ ಮೂಲಕ ಕಾರ್ಡ್‌ಗಳನ್ನು ಪಡೆದುಕೊಳ್ಳಬಹುದು ಎಂದು ಅವರು ತಿಳಿಸಿದ್ದಾರೆ.

ಈ ಕಾರ್ಡ್‌ಗಳಿಂದ 1650 ವಿವಿಧ ಶಸ್ತ್ರಚಿಕಿತ್ಸಾ ವಿಧಾನಗಳಿಗೆ ಸಂಬಂಧಿಸಿದಂತೆ ಬಿಪಿಎಲ್ ಕುಟುಂಬಗಳಿಗೆ ವಾರ್ಷಿಕ 5 ಲಕ್ಷದವರೆಗೆ ಹಾಗೂ ಎಪಿಎಲ್ ಕುಟುಂಬಗಳಿಗೆ ವಾರ್ಷಿಕ 1.5 ಲಕ್ಷದವರೆಗೆ ಸುಸಜ್ಜಿತ ಸರ್ಕಾರಿ ಅಥವಾ ನೋಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸಾ ವೆಚ್ಚ ಸೌಲಭ್ಯ ಪಡೆದುಕೊಳ್ಳಬಹುದು. ಕಾರ್ಡ್‌ಗಳನ್ನು ಪಡೆಯಲು ಬಿಪಿಎಲ್ ಮತ್ತು ಎಪಿಎಲ್ ಕಾರ್ಡ್ ಮತ್ತು ಆಧಾರ್‌ಕಾರ್ಡ್‌ನೊಂದಿಗೆ ತಮ್ಮ ಮೊಬೈಲ್‌ನಲ್ಲಿಯೇ (ಆಂಡ್ರಾಯ್ಡ್ ಮೊಬೈಲ್) ನೋಂದಣಿ ಮೂಲಕ ಕಾರ್ಡ್‌ಗಳನ್ನು ಪಡೆಯಬಹುದು ಎಂದು ಹೇಳಿದ್ದಾರೆ.

*ನೋಂದಣಿ ಮಾಡಿಕೊಳ್ಳುವ ವಿಧಾನ:*

ತಮ್ಮ ಮೊಬೈಲ್‌ನ ಗೂಗಲ್ ವೆಬ್‌ಸೈಟ್‌ನಲ್ಲಿ http://beneficiary.nha.gov.in ಎಂದು ಟೈಪ್ ಮಾಡಿದ ನಂತರ ಪಿ.ಎಮ್.ಜೆ.ವೈ ಬೆನಿಫಿಸಿರಿ ಪೋರ್ಟಲ್ ಕಂಡು ಬರುತ್ತದೆ. ಪೋರ್ಟಲ್ ಅನ್ನು ತೆರೆದಾಗ ಲಾಗಿನ್ ಆಸ್ ಎಂದು ಮಾಹಿತಿ ಕೇಳುವ ಹಂತದಲ್ಲಿ ಬೆನ್‌ಫಿಸಿರಿ ಎಂಬುದನ್ನು ಆಯ್ಕೆ ಮಾಡಿಕೊಳ್ಳಬೇಕು. ನಂತರದಲ್ಲಿ ತಮ್ಮ ಮೊಬೈಲ್ ಸಂಖ್ಯೆಯನ್ನು ನಮೂದಿಸಿ ಒಟಿಪಿ ಮುಖಾಂತರ ಲಾಗಿನ್ ಮಾಡಿಕೊಳ್ಳಬೇಕು. ಒಟಿಪಿ ನೊಂದಾಯಿಸಿ ಸಬ್‌ಮಿಟ್ ಮಾಡಿದ ನಂತರ ಪಿ.ಎಮ್.ಜೆ.ವೈ ಪೋರ್ಟಲ್ ಓಪನ್ ಆಗುತ್ತದೆ. ಇಲ್ಲಿ ಸಾರ್ವಜನಿಕರು ತಮ್ಮ ರಾಜ್ಯ ಎಂಬಲ್ಲಿ ಕರ್ನಾಟಕ, ಜಿಲ್ಲೆ ಎನ್ನುವಲ್ಲಿ ಬಳ್ಳಾರಿ ಎಂದು ಅಥವಾ ತಮ್ಮ ಮೂಲ ಜಿಲ್ಲೆಯನ್ನು ಆಯ್ಕೆ ಮಾಡಿಕೊಂಡು ಕ್ಲೈಮ್‌ಟೈಪ್ ಎನ್ನುವಲ್ಲಿ ಕುಟುಂಬ ಎಂದು ಆಯ್ಕೆ ಮಾಡಿಕೊಂಡು ಆಧಾರ್ ಸಂಖ್ಯೆ ನಮೂದಿಸಿ ಸರ್ಚ್ ಮಾಡಬೇಕು.

ಈಗಾಗಲೇ ಎಬಿ.ಪಿ.ಎಮ್.ಜೆ.ವೈ-ಸಿಎಮ್ ಆರೋಗ್ಯ ಕರ್ನಾಟಕ ಕಾರ್ಡ್ ಅನ್ನು ಬೇರೆ ಯಾವುದಾದರೂ ಯೋಜನೆಗೆ ನೋಂದಣಿ (ಇ-ಕೆವೈಸಿ) ಲಿಂಕ್ ಮಾಡಿಕೊಂಡಿದ್ದರೆ ನೇರವಾಗಿ ಪೋರ್ಟಲ್‌ನಲ್ಲಿ ಕಾರ್ಡ್ ಜನರೇಷನ್ ವೆರಿಫೈ ಎಂದು ಕಂಡು ಬರುತ್ತದೆ. ಒಂದು ವೇಳೆ ಬೇರೆ ಯಾವುದಾದರು ಯೋಜನೆಗೆ ಕಾರ್ಡ್ ಅನ್ನು ನೋಂದಣಿ ಮಾಡದೇ ಇದ್ದರೆ (ನಿಮ್ಮ ಇ-ಕೆವೈಸಿ ಹೊಂದಿಲ್ಲದಿದ್ದರೆ) ಆಧಾರ್ ಒಟಿಪಿ ಮುಖಾಂತರ ಇ-ಕೆವೈಸಿ ಮಾಡಿಕೊಂಡು ಕಾರ್ಡ್‌ನ್ನು ಪಡೆಯಬಹುದಾಗಿದೆ.

ಅತೀ ಮುಖ್ಯವಾಗಿ ಆಯುಷ್ಮಾನ್ ಭವಃ ಕಾರ್ಡ್ ಪಡೆಯಲು ಪ್ರತಿ ಕುಟುಂಬವು ಎಪಿಎಲ್ ಅಥವಾ ಬಿಪಿಎಲ್ ರೇಷನ್ ಕಾರ್ಡ್ ತಪ್ಪದೇ ಹೊಂದಿರಬೇಕು. ರೇಷನ್ ಕಾರ್ಡ್‌ಗಳಿಗೆ ಆಧಾರ್ ಸಂಖ್ಯೆ ಜೋಡಣೆಯಾಗಿರಬೇಕು. ಸಾರ್ವಜನಿಕರು ತಮ್ಮ ಸ್ಮಾರ್ಟ್ ಮೊಬೈಲ್‌ಗಳ ಮೂಲಕ ಯಾವುದೇ ವೆಚ್ಚವಿಲ್ಲದೇ ಸರ್ಕಾರದ ಮಹತ್ವಕಾಂಕ್ಷಿ ಯೋಜನೆಯಾದ ಆಯುಷ್ಮಾನ್ ಭವಃ ಆರೋಗ್ಯ ಕರ್ನಾಟಕ ಯೋಜನೆಯ ಕಾರ್ಡ್‌ಗಳನ್ನು ಪಡೆದುಕೊಳ್ಳಬಹುದಾಗಿದೆ. ತಾಂತ್ರಿಕವಾಗಿ ಯಾವುದೇ ತೊಂದರೆ ಕಂಡುಬಂದಲ್ಲಿ ಸಹ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ. ರಮೇಶ್ ಬಾಬು ತಿಳಿಸಿದ್ದಾರೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA